ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಲ್ಯಾಣ ಕಿರಣ

ಡಿಸೆಂಬರ್ 2016

ಶರಣರ ನಡೆ ಮುಕ್ತಿಯ ಕಡೆ



₹-20/-

http://kalyanakirana.over-blog.com/ ಬ್ಲಾಗ್‌ನಲ್ಲಿ



ಬಸವಾತ್ಮಜೆಯ ಕರೆ

ಬಾ ಬಾ ಬಾ ಎಲೆ ಶರಣ ನೀನು......
ಶರಣ ಮೇಳಕೆ ಬಂದು ಪಾವನನಾಗು ॥ ಪ ॥

ವಿಶ್ವಗುರು ಬಸವಣ್ಣ ಕೊಟ್ಟಿರುವ ಧರ್ಮದ
ಸೋದರತೆ ಬಿಂಬಿಸಲು ಬಾ ಧರ್ಮ ಬಂಧು ॥ ಅ.ಪ.॥

ಅಂದು ಆದಿಯಲಿ ಧರ್ಮಗುರು ಬಸವಣ್ಣ
ಚಂದಾದ ಮಹಾಮನೆಯ ಕಟ್ಟಿ ಕರೆದರು ತಾವು
ಅನುಭವ ಮಂಟಪದ ಆನಂದ ತೊಟ್ಟಿಲಲಿ
ತತ್ವ ಜೋಗುಳ ಹಾಡಿ ಶರಣ ಶಿಶುಗಳ ತೂಗಿ ॥ 1 ॥

ನಾದ ಬಲ್ಲಿದರೆಲ್ಲ ಕೂಡಿದರು ಹುರುಪಿನಲಿ
ಸೂಡ ಕಟ್ಟಿದರು ಶಿವ ನುಡಿಯ
ದೇವ ಮಹಿಮೆಯ ಸಾರಿ ಮನುಜ ಘನತೆಯ ತೋರಿ
ವಚನ ಧರ್ಮದ ಸಿರಿಯು ಸಂಭ್ರಮಿಸಿತಲ್ಲಿ ॥ 2 ॥

ಸಮತೆಯ ಸಾರಲಿಕೆ ಆಯಿತೊಂದು ಕ್ರಾಂತಿ
ಧರ್ಮಪಿತ ಬಸವಗುರು ಗಡಿಪಾರು ಪಡೆದಿಹರು
ಹರಳಯ್ಯ ಮಧುವಯ್ಯ ಪ್ರಾಣವನು ತೆತ್ತಿಹರು
ಮಾಚಯ್ಯ ಚೆನ್ನಣ್ಣ ನಾಗಲೆಯು ಕಾದಿಹರು ॥ 3 ॥

ಶರಣರ ಕರುಳಿನ ಕರೆಯು ತಾ ಕೇಳಿಸದೆ?
ನಿನ್ನ ಋಣ ತೀರಿಸುವ ಛಲವು ತಾ ಮೊಳೆಯದೆ?
ವಚನ ವಾಙ್ಮಯವನ್ನು ನಮಗಾಗಿ ರಕ್ಷಿಸಲು
ಬಲಿದಾನ ಗೈದವರ ಮಹಾತ್ಯಾಗ ಅರಿಯೆಯಾ? ॥ 4 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರಾರ್ಥನೆಯ ಮಾಡಿ ಧನ್ಯನಾಗು ॥ 5 ॥

ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ತತ್ತ್ವವ ತಿಳಿದು ವಿಶ್ವಧರ್ಮಿಯೆ ಆಗು
ಬಸವ ಕಿರಣವೆ ಆಗಿ ತತ್ವವನು ಪಸರಿಸು
ಸಚ್ಚಿದಾನಂದ ಪ್ರಿಯೆ ಮಾತೆಯಾ ಕರೆಯಿದು ॥ 6 ॥

ಭಕ್ತನು ಭಕ್ತನ ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-47	ಬಸವ ಶಕೆ -882	ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-11	ಡಿಸೆಂಬರ್-2016	ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಶರಣ ವ್ರತ ಸ್ವೀಕಾರ

ಶರಣ ಬಂಧುಗಳೇ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿನಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10 ದಿವಸಗಳ ಪ್ರಸಾದ ಸಾರಾಯ ಸಂಪದ್ ವ್ರತ. ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2017ರಂದು ವ್ರತವನ್ನು ಪೂರ್ಣಗೊಳಿಸಬೇಕು.

1. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22ರಂದು
2. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ

ಮೂವತ್ತನೆಯ ಶರಣ ಮೇಳ

2017ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ)ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಮೂವತ್ತನೆಯ ಶರಣ ಮೇಳವು 2017ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ. ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 10,000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು :3000 ರೂ.
2. ಪೋಷಕರು : 8000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 1500 ರೂ.
3. ದಾನಿಗಳು: 5000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 500 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10,000/ 20,000 ರೂಪಾಯಿಗಳ ಪುದುವಟ್ಟು (F.D)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ, ಬ್ಯಾಂಕ್ ಖಾತೆಗಳು

Sharana Mela Utsava Samithi, SB A/c 10818354899
Basava Dharma Peetha, SB A/c No. 10818354684
Basava Mahamane Charitable Trust SB A/c 32391821105

Sharana Mela Utsava Samithi, (Canara Bank, Bengaluru) SB A/c 1145101024057 ಕಾಣಿಕೆ ಕಳಿಸುವವರು ನೇರವಾಗಿ ವರ್ಗಾಯಿಸಿದರೆ ಕಾರ್ಯಾಲಯಕ್ಕೆ ತಿಳಿಸಬೇಕು. 80ಜಿ ಇನ್‌ಕಮ್‌ಟ್ಯಾಕ್ಸ್ ರಿಯಾಯಿತಿ ಬೇಕೆನ್ನುವವರು ಕಾರ್ಯಾಲಯಕ್ಕೆ ಸಂಪರ್ಕಿಸಿ.

ಸಂಪರ್ಕಿಸುವ ವಿಳಾಸಗಳು

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 9448046554/9880768555

ಸಂಪಾದಕೀಯ

ಐಶ್ವರ್ಯಾಂಧಕರ ಮತವನೇನ ಮಾಡಬಂದೆಯಯ್ಯಾ ಸಂಗನ ಬಸವಣ್ಣ?

– ಮಾತಾಜಿ



ಕುಂಡಲಿಗನ ಕೀಟದಂತೆ
ಮೈಮಣ್ಣಾಗದಂತಿರ್ದೆಯಲ್ಲಾ ಬಸವಣ್ಣ
ಜಲದೊಳಗಣ ತಾವರೆಯಂತೆ
ಹೊದ್ದಿಯೂ ಹೊದ್ದದಂತಿರ್ದೆಯಲ್ಲಾ ಬಸವಣ್ಣಾ
ಜಲದಿಂದಲಾದ ಮೌಕ್ತಿಕದಂತೆ
ಜಲವು ತಾನಾಗದಂತಿರ್ದೆಯಲ್ಲಾ ಬಸವಣ್ಣಾ
ಗುಹೇಶ್ವರ ಲಿಂಗದ ಆಣತಿವಿಡಿದು,
ತನುಗುಣಮತ್ತರಾಗಿದ್ದ ಐಶ್ವರ್ಯಾಂಧಕರ
ಮತವನೇನು ಮಾಡಬಂದೆಯಯ್ಯಾ ಸಂಗನ ಬಸವಣ್ಣಾ?
(ಅ.ಪ್ರವಚನ-1262)

ಮಣ್ಣಿನಲ್ಲಿ ಆಡುವ ಹುಳು ಮಣ್ಣನ್ನು
ಮೆತ್ತಿಕೊಳ್ಳದೆ ಇರುವಂತೆ ಇದ್ದೀಯ ಎಂದು ಗುರು ಬಸವಣ್ಣನವರನ್ನು ಕುರಿತು ಅಲ್ಲಮಪ್ರಭುದೇವರು ಹೇಳುತ್ತಾರೆ. ಎರೆಹುಳು ಮಣ್ಣಿನಲ್ಲೇ ಆಡಿದರೂ ಮಣ್ಣನ್ನು ಮೆತ್ತಿಕೊಂಡಿರುವುದಿಲ್ಲ; ಮಣ್ಣಿನ ಗೂಡು ಕಟ್ಟುವ ಕುಂಡಲಿಗನ ಕೀಡೆಯು ಮಣ್ಣನ್ನು ಮೈಗೆ ಹಚ್ಚಿಕೊಳ್ಳವುದಿಲ್ಲ. ಹಾಗೆ ಗುರು ಬಸವಣ್ಣನವರು ರಾಜಕೀಯದಲ್ಲಿ ಇದ್ದರೂ ರಾಜಕೀಯದ ಅಂಟು ಹಚ್ಚಿಕೊಂಡಿರಲಿಲ್ಲ. ನೀರಿನಲ್ಲಿ ಇರುವ ತಾವರೆಯಂತೆ ಹೊದ್ದಿಯೂ ಹೊದ್ದದಂತೆ ಇದ್ದಾರೆ. ನೀರಿನಲ್ಲೇ ಹುಟ್ಟಿದರೂ ಮುತ್ತು ನೀರಿನಲ್ಲಿ ಬೆರೆಯುವುದಿಲ್ಲ. ಹಾಗೆ ಗುರು ಬಸವಣ್ಣನವರು ರಾಜಕೀಯದಲ್ಲಿ ಇದ್ದು ನಿರ್ಲಿಪ್ತವಾಗಿದ್ದಾರಲ್ಲದೆ ಐಶ್ವರ್ಯದಿಂದ ಅಂಧಕರಾಗಿ ತನುಗುಣಮತ್ತರಾಗಿದ್ದ ಶ್ರೀಮಂತರ ಮತವನ್ನು ಧ್ವಂಸಮಾಡಿ ಬಿಟ್ಟರು. ಧರ್ಮವು ಶ್ರೀಮಂತರ, ಪುರೋಹಿತರ ಸೊತ್ತಾಗಿತ್ತು. ಅದನ್ನು ಶ್ರೀಸಾಮಾನ್ಯನ ಸಂಪತ್ತಾಗಿ ಮಾಡಿದರು. ದೇವಾಲಯಗಳು ಶ್ರೀಮಂತಿಕೆಯ ಬೊಕ್ಕಸಗಳಾಗಿದ್ದವು. ಇಷ್ಟಲಿಂಗದ ಮೂಲಕ ಈ ಕೇಂದ್ರೀಕರಣವನ್ನು ತಡೆಗಟ್ಟಿ ಭಕ್ತರಿಗೆ ಸ್ವಾವಲಂಬನೆ ಕಲಿಸಿದರು. ಹೀಗಾಗಿ ಧಾರ್ಮಿಕ ಹಕ್ಕುಗಳು ವಿಕೇಂದ್ರೀಕರಣ ಹೊಂದಿದವು.

ಸನ್ಮಾನ್ಯ ನರೇಂದ್ರ ಮೋದಿಯವರನ್ನು ಗುರು ಬಸವಣ್ಣನವರಿಗೆ ಹೋಲಿಸಲು ಬರುವುದಿಲ್ಲ. ಏಕೆಂದರೆ ಗುರು ಬಸವಣ್ಣನವರನ್ನು ಹೋಲಿಸಲು ಜಗತ್ತಿನಲ್ಲಿ ಯಾರೂ ಸಿಗುವುದಿಲ್ಲ; ಹೋಲಿಸಲು ಬಾರದು. ಆದರೆ ಅನೇಕ ವಿಚಾರಗಳಲ್ಲಿ ಗುರು ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ಶ್ರೀಮೋದಿಯವರು ಸಾಗುತ್ತಿದ್ದಾರೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗದು. "ನಂಟು ಭಕ್ತ ನಾಯಕ ನರಕ" ಎಂದು ಗುರು ಬಸವಣ್ಣನವರು

ಹೇಳುತ್ತಾರೆ. ಒಡೆಯರು ಅಂದರೆ ಪ್ರಜೆಗಳು ಬಂದರೆ ಗುಡಿತೋರಣ ಕಟ್ಟಿ ಸ್ವಾಗತ ಮಾಡುತ್ತೇನೆ. ನಂಟರಿಷ್ಟರು ಬಂದರೆ ಸಮಯವಿಲ್ಲ ಅತ್ತ ಸರಿಯಿರಿ ಎನ್ನುವರು. ಕೆಲವೊಮ್ಮೆ ದೊಡ್ಡವರ ವರ್ತನೆ ವಿಚಿತ್ರ ಎನಿಸುತ್ತದೆ. Cruel to be kind, ಹೂವಿಗಿಂತಲೂ ಮೃದು ವಜ್ರಕ್ಕಿಂತಲೂ ಮಹಾತ್ಮರ ಮನಸ್ಸು ಕಠಿಣ ಎಂದು ಹೇಳಲಾಗುತ್ತದೆ. ಶ್ರೀ ಮೋದಿಯವರು ಬಡವರ ಬಗ್ಗೆ ಕಳಕಳಿಯನ್ನು ಹೊಂದಿದ್ದಾರೆ. ಆದರೆ ಪೂರ್ವಾಶ್ರಮದ ಪತ್ನಿಯನ್ನು ಹಾಗೂ ತಾಯಿಯನ್ನು ಕುರಿತು ಅಷ್ಟೇ ನಿರ್ಲಿಪ್ತ ಸ್ಥಿತಿ ಹೊಂದಿದ್ದಾರೆ. ದೇಶಕ್ಕಾಗಿ ಈ ತ್ಯಾಗಮನೋಭಾವ ಹೊಂದಿದ್ದಾರೆ. ನೋಟುಗಳನ್ನು ಬದಲಾಯಿಸಿಕೊಳ್ಳಲು ವೃದ್ಧ ಮಾತೆ ವೀಲ್‌ಛೇರ್‌ದಲ್ಲಿ ಕ್ಯೂ ನಿಂತಿದ್ದನ್ನು ಕಾಣುತ್ತೇವೆ.

ಅಲ್ಲಮ ಪ್ರಭುದೇವರ ವಚನದಲ್ಲಿ ಬಂದಿರುವ "ತನುಗುಣ ಮತ್ತರಾಗಿದ್ದ ಐಶ್ವರ್ಯಾಂಧಕರ ಮತವನೇನ ಮಾಡಬಂದೆಯಯ್ಯಾ ಸಂಗನ ಬಸವಣ್ಣ" ಎಂಬ ಮಾತು ಇಲ್ಲಿ ಬಹಳ ಮಹತ್ವಪೂರ್ಣ. ಶ್ರೀಮಂತರು ಕಪ್ಪುಹಣದ ಬಲದಿಂದ ತನುಗುಣ ಮತ್ತರಾಗಿ, ಐಶ್ವರ್ಯದಿಂದ ಅಂಧಕರಂತೆ ವರ್ತಿಸುತ್ತಿದ್ದರು. ಇದನ್ನು ಗುರು ಬಸವಣ್ಣನವರು ಬಗ್ಗು ಬಡಿದರು. ಅದೇ ರೀತಿ ಶ್ರೀ ನರೇಂದ್ರ ಮೋದಿಯವರು 1000, 500ರೂ ನೋಟು ರದ್ದು ಮಾಡುವ ಮೂಲಕ ಶ್ರೀಮಂತರ ಬೆನ್ನು ಮುರಿದರು. ಜನ ಸಾಮಾನ್ಯರಿಗೆ ಕೊಂಚಕಾಲ ತೊಂದರೆಯಾಗುತ್ತದೆಯಾದರೂ ಮುಂದೆ ದೇಶಕ್ಕೆ ಹಿತವಾಗುತ್ತದೆ. ಇದರಿಂದ ಕಾಳಧನವನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಜನರು ಈಗ ಆಗುತ್ತಿರುವ ತೊಂದರೆಯನ್ನು ಸಹಿಸಿಕೊಂಡರೆ ದೇಶಕ್ಕೆ ಒಳ್ಳೆತ್ತಾಗುತ್ತದೆ.

ನನಗೆ ಇನ್ನೊಂದು ಆಸೆಯಿದೆ, ಸಂಕಲ್ಪವಿದೆ. ಹಿಂದೊಮ್ಮೆ ಭಾರತ ಮತ್ತು ಪಾಕಿಸ್ತಾನದ ಮಧ್ಯೆಯುದ್ಧವಾದಾಗ ಕಾಶ್ಮೀರದ ಒಂದು ಭಾಗವನ್ನು ಪಾಕ್ ಆಕ್ರಮಿಸಿಕೊಂಡಿತು. ಅದನ್ನು ಬಿಡುಗಡೆ ಮಾಡಲು ನಮ್ಮ ಸೈನ್ಯ ಸಿದ್ಧವಾದಾಗ ಕೇಂದ್ರ ಸರ್ಕಾರ ತಪ್ಪು ನಿರ್ಧಾರವನ್ನು ತೆಗೆದುಕೊಂಡಿತು. ಹೀಗಾಗಿ ಅದು ಪಾಕ್ ಆಕ್ರಮಿತ ಭಾಗವಾಗಿ ಉಳಿದಿದೆ. ಭಾರತದ ಸೈನ್ಯಕ್ಕೆ ಅದನ್ನುಬಿಡುಗಡೆ ಮಾಡುವ ಸಾಮರ್ಥ್ಯವಿದೆ. ಅದಕ್ಕೆ ಕೇಂದ್ರ ಸರ್ಕಾರದ ದೃಢ ಸಂಕಲ್ಪಬೇಕು ಅಷ್ಟೆ. ಶ್ರೀ ನರೇಂದ್ರ ಮೋದಿಯವರಲ್ಲಿ ದೇಶಭಕ್ತಿ ಇದೆ ಸಂಕಲ್ಪ ಶಕ್ತಿ ಇದೆ. ಅವರ ಆಡಳಿತದ ಅವಧಿಯಲ್ಲಿ ಪಾಕ್ ಆಕ್ರಮಿತ ಕಾಶ್ಮೀರವನ್ನು ಬಿಡುಗಡೆ ಮಾಡಲು ಸಾಧ್ಯವಿದೆ. ಅದೊಂದು ಮಹಾನ್ ಕಾರ್ಯವನ್ನು ಶ್ರೀ ಮೋದಿಯವರು ಮಾಡಲಿ ಎಂದು ಹಾರೈಸೋಣ. ಅವರಿಂದ ಇನ್ನೂ ಹೆಚ್ಚಿನ ಕ್ರಾಂತಿಕಾರಿ ಕೆಲಸಗಳು ಆಗಲಿ ಎಂದು ನಿರೀಕ್ಷಿಸೋಣ.

==

ಓದುಗರಿಗೆ ವಿಶೇಷ ಸೂಚನೆ

ನೀವು ಉತ್ತಮ ಚಿಂತಕರು ಹಾಗೂ ಲೇಖಕರಾಗಿದ್ದರೆ ವಿಶೇಷ ಲೇಖನಗಳನ್ನು ಡಿಟಿಪಿ ಮಾಡಿ **basavakumaraswamiji@gmail.com** ಮೇಲ್ ಗೆ ಕಳುಹಿಸಿ

ಅಕ್ಕನ ಅಮರವಾಣಿ

ಭಾಗ- 36 - ಮಾತಾಜಿ

367. ಲಿಂಗಧಾರಣೆಯಿಂದ ಉಳಿದೆಲ್ಲ ಸೌಭಾಗ್ಯ

ಗುರುವಿನ ಕರುಣದಿಂದ ಲಿಂಗವ ಕಂಡೆ, ಜಂಗಮವ ಕಂಡೆ.
ಗುರುವಿನ ಕರುಣದಿಂದ ಪಾದೋದಕವ ಕಂಡೆ, ಪ್ರಸಾದವ ಕಂಡೆ.
ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಸದ್ಗೋಷ್ಠಿಯ ಕಂಡೆ.
ಚೆನ್ನ ಮಲ್ಲಿಕಾರ್ಜುನದೇವರ ದೇವಾ
ನಾ ಹುಟ್ಟಲೊಡನೆ ಶ್ರೀಗುರು ವಿಭೂತಿಯ ಪಟ್ಟವ ಕಟ್ಟಿ
ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು.

ಭಾವಾರ್ಥ- ಲಿಂಗಾಯತ ಧರ್ಮದ ಪ್ರಕಾರ ಹುಟ್ಟಿದ ಮಗುವಿಗೆ ಇಷ್ಟಲಿಂಗಧಾರಣೆ ನೆರವೇರುತ್ತದೆ. ಇದೊಂದು ಮಹಾಭಾಗ್ಯ. ಹುಟ್ಟುತ್ತಲೇ ಸಿಗುವ ಸೌಲಭ್ಯ. ಈ ಲಿಂಗಧಾರಣೆಯಿಂದ ಜಂಗಮದ ಸಂಬಂಧವಾಗುತ್ತದೆ. ಜಂಗಮವೆಂದರೆ ಸಮಾಜ, ಲಿಂಗಧಾರಣೆಯಿಂದ ಲಿಂಗಾಯತ ಸಮಾಜದೊಳಕ್ಕೆ ಪ್ರವೇಶವಾಗುತ್ತದೆ. ಇದಕ್ಕೇ ಗಣಪದವಿ ಹೊಂದುವುದು ಎಂದು ಧರ್ಮಪಿತ ಬಸವಣ್ಣನವರು ಹೇಳುವುದು. ಈ ಗುರು ಕಾರುಣ್ಯದಿಂದ ಕರುಣೋದಕ, ಕರುಣಪ್ರಸಾದ ಲಭ್ಯವಾಗುತ್ತವೆ. ಮುಂದೆ ಶರಣರ ಸಂಗ, ಸಜ್ಜನ ಸದ್ಭಕ್ತರ ಒಡನಾಟ ಮತ್ತು ಸದ್ಗೋಷ್ಠಿಯು ಸಿಗುತ್ತದೆ. ಹೀಗಾಗಿ ದೇವಾ, ನಾನು ಹುಟ್ಟಿದೊಡನೆಯೇ ಶ್ರೀ ಗುರು ವಿಭೂತಿಯ ಪಟ್ಟವ ಕಟ್ಟಿ ಇಷ್ಟಲಿಂಗ ಸಂಬಂಧವನ್ನು ಮಾಡಿದ್ದರಿಂದ ನಾನು ಧನ್ಯಳಾದೆನು ಎಂದು ಅಕ್ಕನವರು ಸಂತೋಷದಿಂದ ಉದ್ಗರಿಸುತ್ತಾರೆ.

ಶರಣರ ಕಾಲದಲ್ಲಿ ಹುಟ್ಟಿದ ತಕ್ಷಣ ಬಿಸಿ ನೀರಿನಲ್ಲಿ ಬಟ್ಟೆಯನ್ನು ಎದ್ದಿ ಒರೆಸಿ ಮಗುವಿಗೆ ವಿಭೂತಿಯನ್ನು ಧರಿಸಿ ಇಷ್ಟಲಿಂಗಧಾರಣೆ ಮಾಡಿ ನಂತರ ಜೇನುತುಪ್ಪ, ಎದೆಹಾಲು ಕೊಡುತ್ತಿದ್ದರು. ಈಗ ಆಸ್ಪತ್ರೆಗಳಲ್ಲಿ ಹೆರಿಗೆ ಆಗುವುದರಿಂದ ಇದು ಸಾಧ್ಯವಾಗದು. ಮನೆಗೆ ಕರೆದುಕೊಂಡು ಬಂದ ನಂತರ ಈ ಕ್ರಿಯೆಯನ್ನು ಮಾಡಬೇಕು. ಗುರುಗಳು ಸಿಕ್ಕಿದರೆ ಸರಿ, ಇಲ್ಲವಾದರೆ ವಿದೇಶಗಳಲ್ಲಿ ಇರುವವರು ಅವರ ಮನೆಯ ಹಿರಿಯರ ಕೈಯಿಂದ ಅಥವಾ ಇನ್ನಿತರ ಶರಣ ಬಂಧುಗಳಿಂದ ಲಿಂಗಧಾರಣೆ ಮಾಡಿಸಬೇಕು. ಈ ಸಂಸ್ಕಾರವನ್ನು ತಪ್ಪಿಸಬಾರದು.

368. ಶರಣರ ಸಂಗದ ಹಿರಿಮೆ

ಗಂಗೆಯೊಡನಾಡಿದ ಘಟ್ಟ ಬೆಟ್ಟಂಗಳು ಕೆಟ್ಟ ಕೇಡ ನೋಡಿರಯ್ಯಾ
ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟ ಕೇಡ ನೋಡಿರಯ್ಯಾ
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯಾ
ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯಾ

ಎಲೆ ಪರಶಿವಮೂರ್ತಿ ಹರನೆ ನಿಮ್ಮ ಜಂಗಮಲಿಂಗದೊಡನಾಡಿ
ಎನ್ನ ಭವಾದಿಭವಂಗಳು ಕೆಟ್ಟ ಕೇಡ ನೋಡಾ,
ಚೆನ್ನಮಲ್ಲಿಕಾರ್ಜುನದೇವರ ದೇವಾ

ನೀರಿನ ಪ್ರವಾಹಕ್ಕೆ ಸಿಕ್ಕಿದ ಬೆಟ್ಟಗಳು ಕರಗುತ್ತವೆ, ಗುಡ್ಡಗಳು ಸವೆಯುತ್ತವೆ. ಹಾಗೆ ಅಗ್ನಿಯ ಸಹವಾಸ ಮಾಡಿದ ಕಟ್ಟಿಗೆ ತನ್ನ ರೂಪ ಕಳೆದುಕೊಂಡು ಸುಟ್ಟು ಬೂದಿಯಾಗುತ್ತದೆ. ಜ್ಯೋತಿಯ ಸಾಂಗತ್ಯ ಮಾಡಿದ ಕತ್ತಲೆ ಪಲಾಯನ ಮಾಡುತ್ತದೆ. ಅದೇ ರೀತಿ ಜ್ಞಾನಿಗಳ ಜೊತೆ ಒಡನಾಡುವ ಅಜ್ಞಾನಿಯ ಅಜ್ಞಾನವು ನಿವಾರಣೆಯಾಗುತ್ತದೆ. ದೇವರೇ, ನಿಮ್ಮ ಶರಣರ ಒಡನಾಟದಿಂದ ನನ್ನ ಭವಾದಿಭವಂಗಳು ನಾಶವಾದವು.

369. ಗುರು ಬಸವಣ್ಣ ಆರಾಧ್ಯ ದೇವರು
ದೇವಲೋಕದವರಿಗೂ ಬಸವಣ್ಣನೆ ದೇವರು.
ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು.
ನಾಗಲೋಕದವರಿಗೂ ಬಸವಣ್ಣನೆ ದೇವರು.
ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ ಬಸವಣ್ಣನೆ ದೇವರು.
ಚೆನ್ನಮಲ್ಲಿಕಾರ್ಜುನದೇವರ ದೇವಾ
ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ದೇವರು

ಲಿಂಗಾಯತ ಧರ್ಮದ ತತ್ವಗಳಲ್ಲಿ ಮುಖ್ಯವಾದುದು ಲಿಂಗಾಚಾರ. ಇದು ಏಕದೇವೋಪಾಸನೆಯನ್ನು ಮತ್ತು ಏಕಗುರೂಪಾಸನೆಯನ್ನು ಕಲಿಸುತ್ತದೆ. ಇಂದು ಲಿಂಗಾಯತ ಸಮಾಜ ಛಿದ್ರವಾಗಿ ತತ್ವರಹಿತವಾಗಿ ನಡೆಯುತ್ತಲಿರುವುದಕ್ಕೆ ಕಾರಣ ಬಹುದೇವತೋಪಾಸನೆ ಮತ್ತು ಬಹುಗುರೂಪಾಸನೆ. ಗುರು-ಲಿಂಗ-ಜಂಗಮ ಬಿಟ್ಟು ಹಲವಾರು ದೇವತೆಗಳ ಬೆನ್ನು ಹತ್ತಿ ಹೊರಟಿರುವುದು ಒಂದು ಕಾರಣವಾದರೆ, ಧರ್ಮಗುರು ಬಸವಣ್ಣನವರ ಮೇಲೆ ಇರಬೇಕಾದ ಏಕಗುರು ನಿಷ್ಠೆ ಇಲ್ಲವಾಗಿ ಸ್ಥಳೀಯ ಗದ್ದುಗೆಗಳ ಆರಾಧನೆ ಮತ್ತೊಂದು ಕಾರಣ. ಕ್ರೈಸ್ತರು ನಿಮ್ಮ ಗುರು ಯಾರು ಎಂದು ಕೇಳಿದರೆ ಯಾವುದೇ ಪಾದ್ರಿಯ ಹೆಸರು ಹೇಳದೆ ಏಸುಕ್ರಿಸ್ತನ ಹೆಸರು ಹೇಳುವರು. ಇಸ್ಲಾಂ ಧರ್ಮದ ಅನುಯಾಯಿಗಳು ತಮ್ಮ ಗುರು ಪ್ರವಾದಿ ಮೊಹಮ್ಮದರೆಂದು ಹೇಳುವರು. ಯಾವುದೇ ಮೌಲ್ವಿಯ ಹೆಸರು ಹೇಳರು. ಲಿಂಗಾಯತರು ತಮ್ಮ ಜಾತಿ ಗುರು, ಕುಲಗುರು, ಸ್ಥಾನಿಕ ಗುರು ಕಡೆಗೆ ಬಿನ್ನಹ ತೀರಿಸುವ ಅಯ್ಯನವರ ಹೆಸರು ಹೇಳುವರು. ಹಿಂದು ಸಮಾಜ ಬಹುದೇವತೋಪಾಸನೆಯಿಂದ ಒಡೆದಿದ್ದರೆ ಲಿಂಗಾಯತ ಸಮಾಜ ಬಹು ಗುರೂಪಾಸನೆಯಿಂದ ಛಿದ್ರಗೊಂಡು ಗುಂಪುಗಾರಿಕೆ ವಿಜೃಂಭಿಸುತ್ತಿದೆ. ಇದಕ್ಕೆ ಪರಿಹಾರವನ್ನು ಅಕ್ಕನವರು ಸೂಚಿಸುತ್ತಾರೆ. ನಮಗಿಂತ ಮೇಲಿನ ಪ್ರದೇಶ(ದೇವಲೋಕ) ದಲ್ಲಿರುವವರು, ಕೆಳಗಿನ ಪ್ರದೇಶ(ನಾಗಲೋಕ)ದಲ್ಲಿರುವವರು, ಮೇರು ಪರ್ವತ, ಮಂದರ ಪರ್ವತದಲ್ಲಿರುವವರು ನಮಗೂ ನಿಮಗೂ ಎಲ್ಲರಿಗೂ ಸಮಸ್ತ ಶರಣ ಸಮೂಹಕ್ಕೆ ಗುರು ಬಸವಣ್ಣನವರೇ ಆರಾಧ್ಯರು ಎಂಬುದು ಅಕ್ಕನವರ ಅಭಿಪ್ರಾಯ

ಇಷ್ಟಲಿಂಗೋಪಾಸನೆ

- ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ



ಒಂದು ನೂರರ ನೋಟು ೧೯೬೦ ರಲ್ಲಿ ಇದ್ದದ್ದು ಅಷ್ಟೇ ಬೆಲೆ, ೨೦೦೦ ರಲ್ಲಿ ಇದ್ದರೂ ಅಷ್ಟೇ ಬೆಲೆ ೨೦೧೦ ರಲ್ಲಿ ಇದ್ದರೂ ಅಷ್ಟೇ ಬೆಲೆ. ಅವಾಗಿನವು ಹಳೇ ನೋಟು. ಈಗಿನವು ಹೊಸ ನೋಟು. ಹಿಂದೆ ಲಿಂಗ ಧರಿಸಿದವರು ಅವರೂ ಲಿಂಗಾಯತರೆ. ಹಳೇ ನೋಟು-ಹೊಸ ನೋಟು ಇದ್ದ ಹಾಗೆ. ನೀವು ಯಾವ ನೋಟನ್ನು ಹೆಚ್ಚು ಪ್ರೀತಿಸುತ್ತೀರಿ? ಹೊಸ ನೋಟನ್ನು ಅಲ್ಲವೆ? ಆದ್ದರಿಂದ ಇಲ್ಲಿ ಭೇದವನ್ನು ಮಾಡಬಾರದು. ಅಂಗದ ಮೇಲೆ ಲಿಂಗ ಇದ್ದವರೆಲ್ಲ ಲಿಂಗದೇವನೆಂದು ಒಂದೆ ಅನ್ನುತ್ತಾರೆ. ಜಗತ್ತಿನ ಮಾನವರೆಲ್ಲರೂ ಉದ್ಧಾರವಾಗಲಿಕ್ಕೆ ಇಷ್ಟಲಿಂಗವನ್ನು ಕೊಟ್ಟರು. ಇಷ್ಟಲಿಂಗ ಅಂದರೆ ಪೂಜೆಗೆ ಅರ್ಹವಾದದ್ದು. ಅನಿಷ್ಟಗಳನ್ನು ಹೊಡೆದೋಡಿಸುವುದು. ದುಷ್ಟಶಕ್ತಿಗಳನ್ನು (Evils) ನಿಗ್ರಹಿಸುವುದು. ಒಳಗಿರುವ ಮನದ ಅಥವಾ ಹೊರಗಿನ ಇಷ್ಟಾರ್ಥಗಳನ್ನು ಪೂರೈಸುವುದೇ ಇಷ್ಟಲಿಂಗ ಪೂಜೆಯ ಮುಖಾಂತರ.

ಇಷ್ಟಲಿಂಗ ಪರಿಕಲ್ಪನೆ ಗುರು ಬಸವಣ್ಣನವರಕ್ಕಿಂತ ಮೊದಲು ಇತ್ತು ಅಂತಾ ಬಿ.ಪಿ. (ಬಸವ ಪೂರ್ವ) (ಪಂಚಾಚಾರ್ಯರು) ರೋಗದವರು ಹೇಳುತ್ತಾರೆ ಮೊದಲು ಇರಲಿಲ್ಲ. ಆವಾಗ ಇತ್ತು ಈವಾಗಿತ್ತು. ಇದಕ್ಕೆ ತಕ್ಕ ಉತ್ತರ ಕೊಡುವ ಗ್ರಂಥವೆಂದರೆ ಡಾ. ಮಾತೆ ಮಹಾದೇವಿಯವರು ಅಧಿಕೃತವಾಗಿ ಬರೆದಂಥ ಸ್ವಯಂಕೃತ ಬಸವಣ್ಣ ಇದನ್ನು ಪೂರ್ತಿಯಾಗಿ ಓದಿ ಮನನ ಮಾಡಿಕೊಂಡರೆ ಎಲ್ಲ ವಿಷಯ ತಿಳಿಯುತ್ತೆ.

"ಬಸವನ ಯೋಗದಿಂ ಹಸನಾಯಿತ್ತೈ ಲೋಕ" ಅಂತಾ ಲಿಂಗಾಂಗಯೋಗಿ ಶ್ರೀ ಸಿದ್ಧರಾಮೇಶ್ವರರು, ಧರ್ಮಗುರು ಬಸವಣ್ಣನವರು ಕೊಟ್ಟಂಥಹ ಈ ಯೋಗ ಲಿಂಗಾಂಗಯೋಗ (ಶಿವಯೋಗ). ಇದು ಪರಿಪೂರ್ಣಯೋಗ. ಇದು ಯಾವ ಜಾತಿ ಮತ ಪಂಥಕ್ಕೆ ಸಂಬಂಧಪಟ್ಟಿಲ್ಲ. ಭಿನ್ನಾಭಿಪ್ರಯವಿಲ್ಲ. ಇದು ಸಮನ್ವಯೋಗ. ಉಳಿದೆಲ್ಲ ಯೋಗಗಳಿಗಿಂತ ಭಿನ್ನವಾದದ್ದು.

ಹಣ ಇದ್ದವ ಹಣವಂತ, ಶೀಲ ಇದ್ದವ ಶೀಲವಂತ, ಆಚಾರ ಇದ್ದವ ಆಚಾರವಂತ, ವಿದ್ಯೆ ಇದ್ದವ ವಿದ್ಯಾವಂತ, ಲಿಂಗವಿದ್ದವ ಲಿಂಗವಂತ. ಲಿಂಗವಂತ ಅಂದರೇನು? ಲಿಂಗ ಅಂದರೆ ದೇವರು. ಯಾರು ದೇವರನ್ನು ಒಪ್ಪುತ್ತಾರೆ, ಯಾರು ದೇವರನ್ನು ಅಪ್ಪಿಕೊಳ್ಳುತ್ತಾರೆ, ಅವರು ಲಿಂಗವಂತರು. ಇದು ಜಾತಿಯ ಕುರುಹಲ್ಲ. ಗುರು ಬಸವಣ್ಣನವರು ವೀರಶೈವರಲ್ಲ. ಕೆಲವರು ವೀರಶೈವರು ಅನ್ನುತ್ತಾರೆ, ಅವರು ಇದಕ್ಕೆ ಹೀಗೆ ಅರ್ಥ ಮಾಡುತ್ತಾರೆ, "ವೀ ಶಬ್ಧ ಉಚ್ಯತೆ ವೀರ, ರ=ರಮಿಸುವವರು, ಯಾರು ಶಿವನಲ್ಲಿ ವೀರರಾಗಿ ರಮಿಸುವವರೋ ಅಂದರೆ ಶಿವಜೀವೈಕ್ಯ ಹೊಂದಿದವರು ಅಂಥ ಅರ್ಥ ಅಂತಾ ಹೇಳುತ್ತಾರೆ. ಶಂಕರಾಚಾರ್ಯರಿರಬಹುದು, ವಿವೇಕಾನಂದರಿರಬಹುದು, ಅರವಿಂದರಿರಬಹುದು. ಇದರಲ್ಲಿ ಇನ್ನೊಂದು ದೋಷವಿದೆ. ವೀ ದೋಷವಿದೆ. ವಿದ್ಯಾ-

ವೃಕ್ಷ, ವೀರಶೈವವು ಶೈವದ ಒಂದು ಟೊಂಗೆ-ಶಾಖೆ ಶೈವ, ಶುದ್ಧ, ಮಾರ್ಗ, ಪ್ರವರ, ಆದಿ,ಕಾಳಾಮುಖ, ಕಾಪಾಲಿಕ,ವೀರಶೈವ ಇತ್ಯಾದಿ ರೆಂಬೆ ಕೊಂಬೆಗಳಲ್ಲಿ ಒಂದೇ ಜಾತಿಯ ಹಣ್ಣನ್ನು ಕೊಡುವವು. ಸೀಬೆ ಗಿಡದ ರೆಂಬೆಯಲ್ಲಿ ಆಯಾ ಹಣ್ಣುಗಳನ್ನು ಕೊಡುವವು. ಅಷ್ಟ ಶೈವರೇ ಇರಲಿ ಸಪ್ತ ಶೈವರೇ ಇರಲಿ ಇವರೆಲ್ಲರೂ ದೇವತಾ ಆರಾಧಕರು. **One of the Branches of Shaivism.** ಸ್ಥಾವರ ಲಿಂಗವನ್ನು ಗುಡಿಯಲ್ಲಿ ಇಟ್ಟು ಪೂಜೆ ಮಾಡುವವರು ಶೈವರು. ಅದನ್ನೇ ಚಿಕ್ಕದಾಗಿಸಿ ಚರಲಿಂಗವನ್ನಾಗಿ ಹಸುಬೆ, ಚೀಲ, ನೆತ್ತಿಯ ಜುಟ್ಟದಲ್ಲಿ ಇಟ್ಟು ಪೂಜೆ ಮಾಡುವವರು ವೀರಶೈವರು. ಇದಕ್ಕೂ ನಮ್ಮ ಲಿಂಗಾಯತ ಧರ್ಮಕ್ಕೂ ಅಜಗಜಾಂತರ ಅಂತರವಿದ್ದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಅವರದು ಮುಖ್ಯವಾಗಿ ದೇವತಾ ಶಿವನನ್ನು ಪೂಜೆ ಮಾಡುವುದಾಗಿದೆ.

ಲಿಂಗಾಯತ ಧರ್ಮ ಅಂದರೆ ತೆಂಗಿನ ಮರವಿದ್ದಂತೆ. ತೆಂಗಿನ ಮರ ಟೊಂಗೆಗಳಿಲ್ಲದೆ ಅಖಂಡವಾಗಿರುತ್ತದೆ. ಅದರಂತೆ ಲಿಂಗಾಯತ ಧರ್ಮ ಸ್ವತಂತ್ರ, ಇದಕ್ಕೆ ಲಿಂಗಾಯತ-ಶರಣ ಧರ್ಮ, ವಚನ ಧರ್ಮ, ಬಸವ ಧರ್ಮ ಅನ್ನುತ್ತಾರೆ.ನಿಮಗೊಂದು ದೃಷ್ಟಾಂತ ಹೇಳುತ್ತೇನೆ ಕೇಳಿರಿ, ಒಮ್ಮೆ ಬಸವಣ್ಣನವರ ಮಹಾಮನೆಯಲ್ಲಿ ಒಂದು ಮಗುವನ್ನು ನಾಮಕರಣ ಮಾಡಲಿಕ್ಕೆ ಶರಣರು ೭೭೦ ಅಮರಗಣಂಗಳು ಹಾಗೂ ಎಲ್ಲಾ ಶರಣರು ಸೇರಿ, ಅನುಭವ ಮಂಟಪ ಅನ್ನುವ ತೊಟ್ಟಿಲಲ್ಲಿ ಈ ಮಗುವನ್ನು ಹಾಕಿ ಏನು ಹೆಸರಿಟ್ಟರು. ಶ್ರೀ ಸಿದ್ಧರಾಮೇಶ್ವರರು-ಇದು ಗುರು ಬಸವಣ್ಣನವರು ಕೊಟ್ಟಧರ್ಮ ಆದಕಾರಣ ಬಸವಕುಮಾರ-ಬಸವ ಧರ್ಮ ಅಂತಾ ಹೆಸರಿಡಬೇಕು. ಇಲ್ಲೊಂದು ಮಾತು ತಿಳಿದುಕೊಳ್ಳುಬೇಕು, ಬಸವ ಧರ್ಮ ಅಂದಿದ್ದರೆ ಇಷ್ಟು ಗೊಂದಲವಾಗುತ್ತಿರಲಿಲ್ಲ. ಕೆಲವು ಜನ ದಿಶಾಭೂಲ ಮಾಡುತ್ತಾರೆ. ಈಗ ಗಮನಿಸಿರಿ ಏಸುಕ್ರಿಸ್ತ-ಮಹಮ್ಮದ ಪೈಗಂಬರ, ಬುದ್ಧ ಈ ಧರ್ಮಗಳು ಅವರ ಹೆಸರಿನಿಂದ ಆಗಿವೆ. ಅದರಂತೆ ಧರ್ಮ ಗುರುವಿನ ಹೆಸರಿನಿಂದಲೇ ಇಂದು ಧರ್ಮ ಜನಪ್ರಿಯವಾಗುವುದು. ಕಾರಣ ಬಸವಧರ್ಮ ಅಂತಾ ನಾವು ಹೆಚ್ಚು ಹೆಚ್ಚಾಗಿ ಬಳಕೆಯಲ್ಲಿ ತರತಾ ಹೋಗಬೇಕು. ಕೆಲವರು ಗುರುತ್ವವನ್ನು ಹೋಗಲಾಡಿಸಲು ಕುತಂತ್ರದಿಂದ ಪ್ರಯತ್ನಿಸಿದರು. ಏಕೆಂದರೆ ಸಮಾನತೆ ತತ್ವಗಳು ಜಾತಿವಾದಿಗಳಿಗೆ ಹಿಡಿಸಲಿಲ್ಲ. ಯಾರಿಗೋ ಗುರುತ್ವದ ಪಟ್ಟ ಕಟ್ಟಲಿಕ್ಕೆ ಹೋಗಿ ಅವಾಂತರ ನಮ್ಮ ಸಮಾಜದಲ್ಲಿ ಆಗಿದೆ.

ಯಾವ ರೀತಿ ಐದು ಜನ ಹೆಂಗಳೆಯರು ಮಗುವಿಗೆ ಹೆಸರನ್ನು ಇಡುತ್ತಾರೆಯೋ ಅದೇ ರೀತಿ ಎಂ.ಆರ್. ಶ್ರೀನಿವಾಸರವರು ವಚನಧರ್ಮಸಾರ ಅಂತಾ ಬರೆದಿದ್ದಾರೆ. ಅದಕ್ಕಾಗಿ ಇದಕ್ಕೆ ೨ನೇ ಹೆಸರನ್ನು ವಚನಧರ್ಮ ಅಂತಾ ಇಟ್ಟರು. ೭೭೦ ಜನ ಅಮರಗಣಂಗಳು ಪಾಲನೆ ಪೋಷಣೆ ಮಾಡಿದ್ದರಿಂದ ಇದಕ್ಕೆ ವೈಶಿಷ್ಯ ಪೂರ್ಣವಾದ ಹೆಸರನ್ನಿಟ್ಟರು, ಅದೇ ಶರಣ ಧರ್ಮ, ಅಂತ ೩ನೇ ಹೆಸರು. ಲಿಂಗಾಯತ-ಲಿಂಗವಂತ. ಲಿಂಗಾಯತ ಇದರ ವಿರುದ್ಧ-ಲೋಕಾಯುತ ಚಾರ್ವಾಕರು. ಜಡವಸ್ತುವನ್ನು ನಂಬುವರು **Materialist** ಲಿಂಗಾಯತ ಶ್ರೇಷ್ಠವಾದ ಪದ. ಲಿಂಗವಂತ ಅಂದರೂ ಒಂದೆ, ಹಣ ಇದ್ದವ ಹಣವಂತ, ಶೀಲ ಇದ್ದವ ಶೀಲವಂತ, ಆಚಾರ ಇದ್ದವ ಆಚಾರವಂತ, ವಿದ್ಯೆ ಇದ್ದವ ವಿದ್ಯಾವಂತ ಅದರಂತೆ ಲಿಂಗವಿದ್ದವ ಲಿಂಗವಂತ. ಲಿಂಗಾಯತ ಲಿಂಗ-ಆಯತ

(ಸಂಬಂಧ) ಸ್ವಾಯತ-ಸನ್ನಿಹಿತ. 'ಲಿಂಗಾಯತ' ಇದು ತಾತ್ವಿಕ ಅರ್ಥವುಳ್ಳದ್ದು ಈ ದರ್ಮದ ವೈಶಿಷ್ಟ್ಯ ಲಿಂಗವನ್ನು ಧರಿಸಿಕೊಳ್ಳುವುದು. ಅದಕ್ಕೆ ೪ನೇ ಹೆಸರು ಲಿಂಗಾಯತ. ಹೆಸರನ್ನಿಡುವಾಗ ವಯಸ್ಸಾದ ಮುದುಕರು, ಮುದುಕಿಯರು ಏ ತಮ್ಮಾ ಹಿರಿಯರ ಹೆಸರನ್ನು ಒಂದು ಇಡು ಅಂತಾ ಹೇಳತಾ ಇರ್ತಾರೆ. ಅದೇ ರೀತಿ ಸಂಪ್ರದಾಯವಾದಿಗಳು ಬಹಳ ಹೇಳಿದ್ದರಿಂದ ಹಳೇ ಹೆಸರಾದ ವೀರಶೈವ ಅನ್ನುವಂತಾ ಹೆಸರನ್ನು ಸಹಿತ ಇಟ್ಟರು. ನವಜಾತ ಶಿಶು ಅನ್ನುವಂತಾ ಲಿಂಗಾಯತ ಧರ್ಮ ಕೆಲವರು ವೀರಶೈವ ಅನ್ನುವ ಪದಕ್ಕೆ ಹೆಚ್ಚಿನ ಒತ್ತು ಕೊಟ್ಟು ಪ್ರಚಾರ ಮಾಡ್ತಾ ಇದ್ದಾರೆ. ಆದಷ್ಟು ಕಡಿಮೆ ಬಳಸಿದರೆ ಮಾತ್ರ ಸಮಾಜ ಕಟ್ಟಲಿಕೆ ಅಗುವುದು. ಇನ್ನೂ ಶ್ರೇಷ್ಠವಾದದ್ದು ಧರ್ಮಗುರುವಿನ ಹೆಸರನಿಂದು ಕರೆಯುವುದು ಸೂಕ್ತ ಪದ.

ಬುದ್ಧನಿಗಿಂತ ಮೊದಲು ಬೌದ್ಧಧರ್ಮ ಇತ್ತು ಅಂತಾ ಯಾವ ಮೂರ್ಖನೂ ಒಪ್ಪಲಾರ. ಅದರಂತೆ ಏಸುಕ್ರಿಸ್ತ-ಕ್ರಿಶ್ಚಿಯನ್ ಧರ್ಮ, ಮೊಹಮ್ಮದ ಪೈಗಂಬರ-ಇಸ್ಲಾಂಧರ್ಮ, ಗುರು ನಾನಕ್-ಶಿಖ್ ಧರ್ಮ. ಈ ಎಲ್ಲ ಧರ್ಮಗಳಿಗಿಂತ ಸುವ್ಯವಸ್ಥಿತವಾಗಿ **Sistimetised** ಮಾಡಿ ಈ ಲಿಂಗಾಯತ ಧರ್ಮವನ್ನು ಗುರು ಬಸವಣ್ಣನವರು ಕೊಟ್ಟಿದ್ದಾರೆ. ಕಾರಣ ಈ ಧರ್ಮವು ಗುರು ಬಸವಣ್ಣನವರಿಂದಲೇ ಹುಟ್ಟಿತು ಅಂತಾ, ಬಲವಾಗಿ ನಂಬಬೇಕು. ಮತ್ತೆ ವಿಷಯಕ್ಕೆ ಬರೋಣ ಇಷ್ಟಲಿಂಗದ ಪರಿಕಲ್ಪನೆ ಬಗ್ಗೆ. ಕೆಲವರು ಇಷ್ಟಲಿಂಗ ಯಾಕೆ ಬೇಕು? ಒಳಗೇ ಆತ್ಮಲಿಂಗ ಇದೆ ಅಂತಾ ವಾದಾ ಮಾಡುತ್ತಾರೆ. ಈ ಕುರಿತು ಮುಂದಿನ ಸಂಚಿಕೆಯಲ್ಲಿ ಚರ್ಚಿಸೋಣ

ಉಳವಿಯ ಬಸವ ಮಹಾಮನೆಯಲ್ಲಿ
ಸಾಮೂಹಿಕ ಇಷ್ಟಲಿಂಗಾರ್ಚನೆ

ಶರಣ ಬಂಧುಗಳೇ,

ಉಳವಿಯ ಸುಕ್ಷೇತ್ರದಲ್ಲಿ ಬಸವ ಧರ್ಮ ಪೀಠದಿಂದ ಒಂದು ಜಾಗವನ್ನು ಖರೀದಿಸಲಾಗಿದೆ. ಶ್ರೀ ಚನ್ನಬಸವೇಶ್ವರ ದೇವಾಲಯದಿಂದ ಸುಮಾರು ಒಂದೂವರೆ ಕಿಲೋಮೀಟರ್ ದೂರದಲ್ಲಿ ಹರಳಯ್ಯನ ಚಿಲುಮೆ ಪ್ರದೇಶದ ಎದುರಿಗೆ ರಸ್ತೆಗೆ ಅಂಟಿಕೊಂಡು ಈ ಜಾಗವಿದೆ. ಇಲ್ಲಿ ಶಿವರಾತ್ರಿಯ ದಿನ ಗಣಮೇಳವನ್ನು ೨೦೧೭ರ ಫೆಬ್ರವರಿ ೨೪ರಂದು ಶುಕ್ರ(ಮಾತೃ)ವಾರದಂದು ಸಾಮೂಹಿಕ ಇಷ್ಟಲಿಂಗಪೂಜೆಯನ್ನು ಪೂಜ್ಯ ಶ್ರೀಮನ್ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಏರ್ಪಡಿಸಲಾಗಿದೆ. ಬೆಳಿಗ್ಗೆ ೧೧ ಗಂಟೆಯಿಂದ ಪೂಜಾ ಕಾರ್ಯಕ್ರಮ ನೆರವೇರಲಿದೆ. ನಮ್ಮ ಜಾಗದ ತನಕ ವಾಹನಗಳು ಕೂಡಾ ಸಾಗುತ್ತವೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಸೂಚಿಸುತ್ತೇವೆ. ದಾಸೋಹಕ್ಕೆ ಕಾಣಿಕೆ ನೀಡುವವರಿಗೆ ಅವಕಾಶವಿರುತ್ತದೆ. ತನು ಮನ ಧನದಿಂದ ಸಹಕರಿಸಬೇಕೆಂದು ಕೋರುತ್ತೇವೆ.

– ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮೀಜಿ
ಪೀಠಾಧ್ಯಕ್ಷರು, ಚನ್ನಬಸವೇಶ್ವರ ಜ್ಞಾನಪೀಠ
ಸುಕ್ಷೇತ್ರ ಉಳವಿ

ಮಹಾನ್ ಶರಣರು

ಪೂಜ್ಯ ಅಪ್ಪಾಜಿ ಹಾಗೂ ಪೂಜ್ಯ ಮಾತಾಜಿ

ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ





ಶರಣಮೇಳದ ರೂಹಾರಿಗಳು ಪೂಜ್ಯ ಜಗದ್ಗುರುಗಳು. ಶರಣ ಮೇಳ ಎಂದರೆ ಶರಣರ ಸಮಾವೇಶ. ಶರಣರ ಕೂಡುವಿಕೆ ಎಂದರ್ಥ. ಇಂಥದೊಂದು ಸಮಾವೇಶ ನಡೆಯಬೇಕು ಎಂಬುದು ಆದಿ ಶರಣರ ಸಂಕಲ್ಪದಲ್ಲಿ ಇದ್ದಿತು ಎಂಬುದಕ್ಕೆ ಕೆಳಕಂಡ ಉಕ್ತಿಗಳೇ ಸಾಕ್ಷಿ.

- ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನನೆರೆವರಯ್ಯಾ.
- ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು, ಜರಿಯಲು ಬೇಡ ಅಂದು ನೋಡುವುದು.

ಅಮೃತ ರಸಾಯನವೆಂದು ಶರಣ ಸಂತತಿಗಳು ತಿಳಿವರು.

- ಇವು ಮಡಿವಾಳ ಮಾಚಿದೇವರ ಕಾಲಜ್ಞಾನ ವಚನಗಳು 820 ವರ್ಷಗಳ ಹಿಂದೆ ಹೇಳಲ್ಪಟ್ಟವು. ಶರಣ ಮೇಳದ ವಿವರಣೆ ನೀಡುತ್ತಿರುವಂತೆ ಎನ್ನಿಸುತ್ತದೆ. ಶರಣ ಮೇಳ ಮಾಡಲು ಆರಂಭಿಸಿದ್ದು ಸಂಕಲ್ಪಿಸಿದ್ದು, ಮಾನವರ ದೃಷ್ಟಿಕೋನದಲ್ಲಿ ಆಕಸ್ಮಿಕ ಎನಿಸಿದರೂ ಇದು ಪೂರ್ವ ನಿರ್ಧಾರಿತ ಆದಿ ಶರಣರ ಸಂಕಲ್ಪದ ಫಲ ಎಂದು ಮನದಟ್ಟಾಗದಿರದು.
- ನಾರಿಯೊಬ್ಬಳು ಒಂದು ಭಾರಿ ಅಬ್ಬರವ ಹೊತ್ತು ಆರೂಢ ಭಿಕ್ಷೆ ಬೇಡ್ಯಾಳ ಸುವ್ವಿ ವೀರ ಬಸವಣ್ಣ ಬರುವಾಗ ಸುವ್ವಿ.

ಈ ವಚನ ನೀಲಾಂಬಿಕಾ ತಾಯಿಯವರು ನುಡಿದ ಅಮೃತವಾಣಿ. ಇದು ಕೂಡಲಸಂಗಮ ಪರಮೋಚ್ಚ ಪೀಠಾಧ್ಯಕ್ಷರಾದ ಪರಮಪೂಜ್ಯ ಶ್ರೀಮನ್ ನಿರಂಜನ ಪ್ರಣವ ಸ್ವರೂಪಿ ಮಹಾ ಜಗದ್ಗುರು ಡಾ. ಮಾತೆ ಮಹಾದೇವಿಯವರ ವ್ಯಕ್ತಿತ್ವಕ್ಕೆ ನಿದರ್ಶನವಾಗಿರುವುದು. 'ಶರಣ ಮೇಳ'ದ ಪರಿಕಲ್ಪನೆ ಮೂಡಿದ್ದೇ ಪೂಜ್ಯ ಮಾತಾಜಿಯವರ ಹೃನ್ಮಂದಿರದಲ್ಲಿ ಪ್ರೇರಣೆ ಆದ ಮೇಲೆ ಯಾವುದೇ ಕಾರ್ಯವಿರಲಿ ಅದನ್ನು ಶಿರಸಾವಹಿಸಿ ಏನೇ, ಎಷ್ಟೇ ಕಷ್ಟಗಳು ಬಂದರೂ ನಿಷ್ಠೆಯಿಂದ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಗುರು ಬಸವಣ್ಣನವರ ಕಾರುಣ್ಯ, ಅನುಗ್ರಹ ಆಶೀರ್ವಾದಗಳೊಂದಿಗೆ ಯಶಸ್ವಿಗೊಳಿಸುವುದೇ ಪೂಜ್ಯ ಮಾತಾಜಿಯವರ ಛಲಗಾರಿಕೆ. ಪರಮಪೂಜ್ಯ ಶ್ರೀಮನಿ ಪ್ರ.ಸ್ವ. ಮಹಾಜಗದ್ಗುರು ಲಿಂಗಾನಂದ ಮಹಾ ಸ್ವಾಮೀಜಿಯವರ ಮಾರ್ಗದರ್ಶನದ ಮೇರೆಗೆ ಕೂಡಲಸಂಗಮದಲ್ಲಿ 1987ರಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ರಚಿಸಿ ಜಮೀನು ಖರೀದಿಸಿ ಗುಡಿಸಲು ಹಾಕಿ ಆಯ್.ಬಿ.ಯಲ್ಲಿ ಉಳಿದರು. ಐತಿಹಾಸಿಕ ಪ್ರಪ್ರಥಮ ಶರಣ ಮೇಳವನ್ನು 1988ರ ಜನವರಿ, 12 ರಿಂದ 14ರವರೆಗೆ ಮೂರು ದಿವಸ ನಡೆಸಬೇಕೆಂದು ಸತ್‌ಸಂಕಲ್ಪ ಮಾಡಿದರು. ಪೂರ್ವಭಾವಿಯಾಗಿ ಕರ್ನಾಟಕದ ನಾನಾ ಭಾಗಗಳಲ್ಲಿ ಹೊರ ರಾಜ್ಯ ಮಹಾರಾಷ್ಟ್ರ, ಆಂದ್ರನಾಡು, ತಮಿಳುನಾಡುಗಳಲ್ಲಿ ಪೂಜ್ಯ ಅಪ್ಪಾಜಿ ಪೂಜ್ಯ ಮಾತಾಜಿ, ಪೂಜ್ಯ ಗಂಗಾ

ಮಾತಾಜಿಯವರು ಹಾಗೂ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಪ್ರಚಾರ ಕಾರ್ಯ ಕೈಗೊಂಡರು. ಇದರ ಪರಿಣಾಮವಾಗಿ ನಾಡಿನ ಬಸವಾಭಿಮಾನಿ ಮಠಾಧೀಶರು, ಗಣ್ಯ ಮಾನ್ಯರು ರಾಜಕೀಯ ಧುರೀಣರು, ಶರಣ ಶರಣೆಯರು ಊಹೆಗೂ ಮೀರಿ 2½ (ಎರಡೂವರೆ) ಲಕ್ಷ ಬಸವ ಭಕ್ತರು ಸಮಾವೇಶವಾದರು. ಇಷ್ಟೊಂದು ಶಕ್ತಿ ಸಾಮರ್ಥ್ಯ ಬರಲು ಪೂಜ್ಯ ಮಾತಾಜಿಯವರಿಗೆ ಪೂಜ್ಯ ಅಪ್ಪಾಜಿಯವರ ಸಹೃದಯತೆ ಪ್ರಾಮುಖ್ಯ 1965ರಲ್ಲಿ ಪೂಜ್ಯ ಮಾತಾಜಿಯವರು ಮನೆಬಿಟ್ಟು ಅಪ್ಪಾಜಿಯವರ ಸನ್ನಿಧಿಗೆ ಬಂದಾಗ ಅವರಿಗೆ ಅವಕಾಶಕೊಟ್ಟು ಬರಮಾಡಿಕೊಂಡು ಅವರನ್ನು ಗುರುತಿಸಿ ಒಂದು ಮಹತ್ವದ ಮಾತನ್ನು ನುಡಿಯುತ್ತಾರೆ. ರಾಮಕೃಷ್ಣ ಪರಮಹಂಸರಿಗೆ ವಿವೇಕಾನಂದರ ಆಗಮನ, ಮಹರ್ಷಿ ಅರವಿಂದರಿಗೆ ಮಾತೆಯವರ ಆಗಮನ, ಗುರು ಬಸವಣ್ಣನವರಿಗೆ ಅಕ್ಕ ಮಹಾದೇವಿಯವರ ಆಗಮನದಂತೆ ನನಗೆ ನೀವು ಮಾತೆ ಮಹಾದೇವಿಯವರಾಗಿ ಬಂದಿದ್ದೀರಿ. ಶರಣರ ಆಶೋತ್ತರಗಳನ್ನು ಪೂರೈಸಲು ಬಂದಿದ್ದೀರಿ. ಅವರಂದ ಹಾಗೆ ಪೂಜ್ಯ ಮಾತಾಜಿಯವರು ಬಂದಾಗ ಬರೀ ಜೋಳಿಗೆ ಯಾವ ನೆಲೆಯೂ ಇರಲಿಲ್ಲ. 1966ರಲ್ಲಿ ಜಂಗಮ ದೀಕ್ಷೆ ನೀಡಿದರು. 1968ರಲ್ಲಿ ಧಾರವಾಡ ಆಶ್ರಮದ ಜಮೀನು ಖರೀದಿಯಾಯಿತು. ಗುರು ಬಸವ ಜಯಂತಿ ಅಷ್ಟ ಶತಮಾನೋತ್ಸವ ಸಮಾರಂಭ ಬಸವ ಕಲ್ಯಾಣದಲ್ಲಿ ನಾಡಿನ ಮಠಾಧೀಶರು, ಶಾಸ್ತ್ರಿಗಳು, ಗಣ್ಯ ಮಾನ್ಯರು, ರಾಜಕೀಯ ವ್ಯಕ್ತಿಗಳು, ಸಹಸ್ರಾರು ಸಂಖ್ಯೆಯಲ್ಲಿ ಸದ್ಭಕ್ತರು ಸಮಾವೇಶವಾದ ಸಂದರ್ಭದಲ್ಲಿ ಪೂಜ್ಯ ಮಾತಾಜಿಯವರ ಅಮೃತವಾಣಿಯಿಂದ ಸ್ತ್ರೀ ಗುರುಪೀಠದ ಪ್ರಸ್ತಾವನೆ ಘೋಷಣೆ ಮಾಡಿದಾಗ ನೂರಕ್ಕೆ ತೊಂಭತ್ತೊಂಭತ್ತು ಪ್ರತಿಶತ ಜನರು ಕರತಾಡನದೊಂದಿಗೆ ಒಪ್ಪಿಗೆ ಮೂಲಕ ಹರ್ಷವನ್ನು ತೋರ್ಪಡಿಸಿದರು. ಕೆಲವು ಮಠಾಧೀಶರು, ಶಾಸ್ತ್ರಿಗಳು ವಿರೋಧಿಸಿದಾಗ ಪೂಜ್ಯ ಅಪ್ಪಾಜಿಯವರು ಸ್ತ್ರೀ ಪೀಠವನ್ನು ಮಾಡಿಯೇ ತೀರುತ್ತೇವೆಂದು ಧಾರವಾಡದಲ್ಲಿ ಜಗನ್ಮಾತೆ ಅಕ್ಕಮಹಾದೇವಿ ಅನುಭಾವ ಪೀಠವನ್ನು ಸ್ಥಾಪಿಸಿದರು. ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುಗಳನ್ನಾಗಿ ಘೋಷಿಸಿ ಪೂಜ್ಯ ಮಾತಾಜಿಯವರನ್ನು ಪೀಠದ ಮೇಲೆ ಕೂಡ್ರಿಸಿ ಪಾದಪೂಜೆಗೈದರು. ಅಷ್ಟೊತ್ತಿಗೆ ಪೂಜ್ಯ ಮಾತಾಜಿಯವರು ವಿಜ್ಞಾನ ಹಾಗೂ ತತ್ವಜ್ಞಾನದಲ್ಲಿ ಪ್ರಥಮ ರ್‍ಯಾಂಕಿನೊಂದಿಗೆ ಎಂ.ಎ. ಮುಗಿಸಿದ್ದರು.

ಸದ್ಗುರುಗಳಾದ ಪೂಜ್ಯ ಅಪ್ಪಾಜಿಯುವರು, ಜಗದ್ಗುರುಗಳನ್ನಾಗಿ ಮಾತಾಜಿಯವರನ್ನು ಗೌರವಿಸಿದರೆ ಪೂಜ್ಯ ಮಾತಾಜಿಯವರು ಗುರುವಿನ ಋಣ ತೀರಿಸಲು 1992ರಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ವತಿಯಿಂದ ಮಹಾಜಗದ್ಗುರುಗಳನ್ನಾಗಿ ಪೀಠಕ್ಕೆ ಏರಿಸಿದರು. ಈ ಅಪರೂಪದ ಗುರುಶಿಷ್ಯರ ಕೃಪಾಶೀರ್ವಾದದಿಂದ ಕೂಡಲಸಂಗಮ, ಬೆಂಗಳೂರು, ಬಸವಗಂಗೋತ್ರಿ, ಬಸವಕಲ್ಯಾಣ, ದೆಹಲಿ, ಅಲ್ಲಮಗಿರಿ ಮಹಾರಾಷ್ಟ್ರ ಆಶ್ರಮಗಳು, ಹಲವಾರು ಬಸವ ಮಂಟಪಗಳು, ಬಸವಕಲ್ಯಾಣದಲ್ಲಿ 108 ಅಡಿ ಬಸವ ಪುತ್ಥಳಿ ಅನಾವರಣ, ಬೆಂಗಳೂರಿನ ಬಸವಗಂಗೋತ್ರಿ ಕುಂಬಳಗೂಡಿನಲ್ಲಿ 111 ಅಡಿ ಬಸವ ಪುತ್ಥಳಿ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ.

ಕರ್ನಾಟಕದ ತುಂಬೆಲ್ಲಾ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಗೋವಾ, ದೆಹಲಿ ಹಾಗೂ ಇಂಗ್ಲೆಂಡ್, ಅಮೇರಿಕಾದಂತಹ ಹೊರದೇಶಗಳಲ್ಲಿ ಇಷ್ಟಲಿಂಗಾರ್ಚನೆಯೊಂದಿಗೆ ದೀಕ್ಷೆ ನೀಡಿ, ವಿಶ್ವಧರ್ಮ ಪ್ರವಚನವನ್ನು ನೆರವೇರಿಸಿದ್ದಾರೆ. ಯಾವುದೇ ಜಾತಿ-ಮತ, ಪಂಥ, ವರ್ಗ, ವರ್ಣ ಸ್ತ್ರೀ-ಪುರುಷರೆಂಬ

ಬೇಧ-ಭಾವವಿಲ್ಲದೆ ಎಲ್ಲರಿಗೂ ಧರ್ಮ ಪ್ರಚಾರಕ್ಕಾಗಿ ಅಣಿಗೊಳಿಸಿದ್ದಾರೆ. ಸಾಧಕ, ಸಾಧಕಿಯರನ್ನು, ಕೋಟಿ ಕೋಟಿ ಅನುಯಾಯಿಗಳನ್ನು ಹೊಂದಿದ್ದಾರೆ. ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳಿಗೆ ಹೊಸದೊಂದು ರೂಪವನ್ನು ಕೊಟ್ಟು ಸರಳೀಕರಿಸಿದ್ದಾರೆ. ಪಂಚಾಚಾರಗಳಿಗೆ ಇನ್ನೊಂದು ಬಸವಾಚಾರವನ್ನು ಸೇರಿಸಿ ಷಡಾಚಾರಗಳನ್ನಾಗಿ ರೂಪಿಸಿ, ತನು, ಮನ, ಧನ ತ್ರಿವಿಧ ದಾಸೋಹಗಳಿಗೆ ಸಮಯ, ಪ್ರಾಣ, ಅಭಿಮಾನ ಅನ್ನುವ ಮೂರನ್ನು ಸೇರಿಸಿ ಷಟ್ ದಾಸೋಹಗಳನ್ನಾಗಿ ಪರಿವರ್ತಿಸಿದ್ದಾರೆ. ಜಾಗತಿಕ ಧರ್ಮಗಳ ಸಾಲಿನಲ್ಲಿ 'ಲಿಂಗಾಯಿತ ಧರ್ಮ' ನಿಲ್ಲುವ ಹಾಗೆ ಮಾಡಿದ್ದಲ್ಲದೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವ ಹಾಗೆ ಶ್ರಮಿಸಿದ್ದಾರೆ. 5-6 ನೂರು ಅನಾಥ ಮಕ್ಕಳಿಗೆ ಆಶ್ರಯದಾತರಾಗಿ, ವೃದ್ಧ ಜೀವಿಗಳಿಗೆ ಜೀವಿಸುವ ಭರವಸೆಯನ್ನು ಹಾಗೂ ನೊಂದು ಬೆಂದು ಬಂದ ಹೆಣ್ಣು ಮಕ್ಕಳ ಕಣ್ಣೀರೊರೆಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. 170ಕ್ಕಿಂತ ಹೆಚ್ಚು ಗ್ರಂಥಗಳು, ಸಿಡಿ, ಕ್ಯಾಸೆಟ್ಟುಗಳು ಬಸವ ಸಾಹಿತ್ಯದ ಹಲವಾರು ವಸ್ತುಗಳು, ಧಾರ್ಮಿಕ ಸಾಧನೆಗೆ ಬೇಕಾದ ಎಲ್ಲಾ ವಿಧದಿಂದಲೂ ಹಗುರವಾಗುವ ಮಾರ್ಗ ತೋರಿಸಿದ್ದಾರೆ. ಹೀಗೆ ಪೂಜ್ಯದ್ವಯರ ಮಹಾತ್ಮೆಯನ್ನು ಎಷ್ಟು ಹೊಗಳಿದರೂ ತೀರಲಾರದು. ಅಷ್ಟೊಂದು ಘನ ಕಾರ್ಯಗಳನ್ನು ಸಮಾಜ ಮುಖಿಯಾಗಿ ಮಾಡಿ ಧನ್ಯಾತ್ಮರಾಗಿದ್ದಾರೆ.

ಮಂತ್ರಿ ಹೇಗಿರಬೇಕು ? (ಕವನ)

ಮಂತ್ರಿಯಾಗಿರಬೇಕು ಗುರು ಬಸವಣ್ಣನವರಂತೆ
ಕಲ್ಯಾಣ ಕ್ರಾಂತಿಯ ಧೀರ ಯೋಧನಂತೆ
ಸಮಗ್ರ ಕಲ್ಯಾಣ ನಿರ್ಮಾಣದ ನೇತಾರನಂತೆ
ಭ್ರಷ್ಟಾಚಾರ ದೂರ ಸರಿಸಿದ ಮಹಾನ್ ದ್ರಷ್ಟಾರನಂತೆ
ಅಧಿಕಾರ ವ್ಯಾಮೋಹದ ಬಳ್ಳಿ ಕಡೆದ ಮಹಾ ತ್ಯಾಗಿಯಂತೆ
ಜಾತಿ ವರ್ಣ ವರ್ಗ ಬೇಧವಳಿದ ಮಹಾ ಪುರುಷನಂತೆ
ಎಲ್ಲರೂ ತನ್ನವರೆಂಬ ಹದುಳ ಭಾವದ ವಿಶ್ವ ಕುಟುಂಬಿಯಂತೆ
ಅಧಿಕಾರವೆಂಬುದು ದೇವನು ಕೊಟ್ಟ ತೊತ್ತುಗೆಲಸವೆಂದು
ನಂಬಿ ನಡಿಸಿದ ನಂಬಿಗಸ್ತ ಸೇವಕನಂತೆ
ಬಾಗಿದ ತಲೆ ಮುಗಿದ ಕೈಯಾಗಿರಿಸಿಕೊಂಡ ಕಿಂಕರನಂತೆ
ಸತ್ಯಶುದ್ಧ ಕಾಯಕ ಮಾಡಿ ಕಾಯಕ ಯೋಗಿಯೆಂದೆನಿಸಿಕೊಂಡಂತೆ
ಕಲ್ಯಾಣವನ್ನು ಕಾಯಕ ತೆಪ್ಪದಲ್ಲಿ ತೇಲಿಸಿ ಸಮೃದ್ಧಿಗೊಳಿಸಿದಂತೆ
ದಯೆ ಕರುಣೆ ಪ್ರೀತಿಯನ್ನು ಪ್ರಜಾ ರಾಜ್ಯಕ್ಕೆ ಹರಿಸಿದ ಪ್ರೇಮ ಮೂರ್ತಿಯಂತೆ
ಸಕಲ ಜೀವಾತ್ಮರ ಲೇಸನ್ನೇ ಬಯಸಿದ ದಯಾ ಸಾಗರನಂತೆ
ಅನುಭವ ಮಂಟಪವೆಂಬ ಪ್ರಥಮ ಪಾರ್ಲಿಮೆಂಟ್ ಸ್ಥಾಪಿಸಿ
ಕಲ್ಯಾಣದ ಆಗುಹೋಗುಗಳ ಚರ್ಚೆಗಳ ನಡಿಸಿದಂತೆ
ದೇಶದ ಪ್ರಗತಿಗಾಗುವಂತ ವಚನ ಶಾಸನಗಳ ಹೊರಡಿಸಿ
ಕಲ್ಯಾಣ ರಾಜ್ಯ ನಿರ್ಮಾಣಮಾಡಿದಂತೆ
ಮಂತ್ರಿಯಾಗಿರಬೇಕು ಗುರು ಬಸವಣ್ಣನವರಂತೆ.

-ಶಾರದಾ ಬಸವರಾಜ್, ಭದ್ರಾವತಿ

ಸಮಸ್ಯೆ-ಸಮಾಧಾನ

-ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮೀಜಿ

೧. ಸಮಸ್ಯೆ:- ಕುಂಡಲಿನಿ ಜಾಗೃತಿ ಅಂದರೇನು? ಯಾವ ಸಾಧನೆಯನ್ನು ಮಾಡಿದರೆ ಸಾಧ್ಯ ಹೇಗೆ ಮಾಡಬೇಕು. ಅದರಿಂದ ಪ್ರಯೋಜನವೇನಿದೆ? ವಿವರಿಸಿ.

ಸಮಾಧಾನ:- ನಮ್ಮ ಶರೀರದ ಗುದ ಸ್ಥಾನವೇ ಆಧಾರ ಚಕ್ರದಲ್ಲಿದೆ, ಒಟ್ಟು ಒಂಭತ್ತು ಚಕ್ರಗಳು. ಆಧಾರ, ಸ್ವಾಧಿಷ್ಠಾನ, ಮಣಿಪೂರಕ ಅನಾಹತ, ವಿಶುದ್ಧಿ, ಆಜ್ಞಾ, ಬ್ರಹ್ಮ, ಶಿಖಾ ಹಾಗೂ ಪಶ್ಚಿಮ. ಕುಂಡಲಿನಿ ಸರ್ಪ ಅಧಾರದಲ್ಲಿ ಅಧೋಮುಖವಾಗಿ ಮಡಗಿಕೊಂಡಿರುತ್ತದೆ. ಯಾವಾಗಲೂ ಅದು ವಿಷ(ವಿಷಯ)ವನ್ನು ಕಾರುತ್ತಿರುತ್ತದೆ. ಕೋಟಿ ಕೋಟಿ ಜನರು ಇದಕ್ಕೆ ಸಿಲ್ಕಿರುತ್ತಾರೆ. "ಹೆಣ್ಣಿಗಾಗಿ ಸತ್ತುದೊಂದು ಕೋಟ್ಯಾನುಕೋಟಿ, ಹೊನ್ನಿಗಾಗಿ ಸತ್ತುದೊಂದು ಕೋಟ್ಯಾನುಕೋಟಿ, ಮಣ್ಣಿಗಾಗಿ ಸತ್ತುದೊಂದು ಕೋಟ್ಯಾನುಕೋಟಿ ಗುಹೇಶ್ವರಾ ನಿನಗಾಗಿ ಸತ್ತವರನ್ನು ಒಬ್ಬರನೂ ಕಾಣೆ. ಎಂದು ನಿಜಸ್ಥಿತಿಯನ್ನು ಮನವರಿಕೆಮಾಡಿಕೊಟ್ಟಿದ್ದಾರೆ ವ್ಯೋಮಕಾಯಸಿದ್ಧ ಅಲ್ಲಮಪ್ರಭುದೇವರು.

ಒಂದು ಬುಟ್ಟಿಯಲ್ಲಿ ಹಾವಾಡಿಗನು ನಾಗರಹಾವನ್ನು ಇಟ್ಟುಕೊಂಡಿರುತ್ತಾನೆ. ಹಾವಾಡಿಗನು ಆಟವನ್ನು ಪ್ರಾರಂಭಿಸುವಾಗ ಬುಟ್ಟಿಯ ಮುಚ್ಚಳವನ್ನು ತೆಗೆದು, ಸುರುಳಿ ಸುತ್ತಿಕೊಂಡು ಮಲಗಿರುವ ಹಾವಿಗೆ ಕೋಲಿನಿಂದ ಅಥವಾ ಕೈಯಿಂದ ಬಡಿಯುತ್ತಾನೆ. ಆಗ ನಾಗರ ಹಾವು ಚಕ್ಕನೆ ಹೆಡೆಯೆತ್ತಿ ಎದ್ದು ನಿಲ್ಲುವುದು. ಅದರಂತೆ ಸಾಧಕನಾದರೂ ಸಹಿತ ಯೌಗಿಕ ಶಕ್ತಿಯಿಂದ ಕುಂಡಲಿನಿ ಶಕ್ತಿ(ಸರ್ಪ)ಯನ್ನು ಮೇಲಕ್ಕೆ ಎತ್ತಿದಾಗ ಊರ್ಧ್ವಕ್ಕೆ ಮುಖ ಮಾಡುವುದು. ಇದಕ್ಕೆ ಕುಂಡಲಿನೀ ಜಾಗೃತಿ ಎನ್ನುತ್ತಾರೆ.

"ಅಷ್ಟಾಂಗಯೋಗವ ಮಾಡಿ ಬಳಲುವರು,
ದೃಷ್ಟಿ ಇಡುವುದನು ಮರೆದಿಹರು".

ಇದು ಮಹಾಯೋಗಿಣಿ ವೈರಾಗ್ಯ ನಿಧಿ ಜಗನ್ಮಾತೆ ಅಕ್ಕಮಹಾದೇವಿಯವರ ಅನುಭವದ ನುಡಿ. ಯೋಗ್ಯ ಸದ್ಗುರುವಿನಿಂದ ಉತ್ತಮವಾದ ಅಂಗುಷ್ಠ ಪ್ರಮಾಣದ ಮ್ಯಾಗನೇಟ್ ಹಾಕಿ ತಯಾರಿಸಿದ ಇಷ್ಟಲಿಂಗ ದೀಕ್ಷೆಯನ್ನು ಹೊಂದಬೇಕು. ಇಷ್ಟಲಿಂಗಾರ್ಚನೆಗೆಂದೇ ಒಂದು ಕತ್ತಲೆಯಿಂದ ಕೂಡಿದ ಕೋಣೆಯನ್ನು ಮಾಡಿಕೊಂಡಿರಬೇಕು ಎದುರುಗಡೆ ಒಂದೇ ಒಂದು ಅಭಯಹಸ್ತದ ಧರ್ಮಗುರು ಬಸವಣ್ಣನವರ ಮೂರ್ತಿ ಅಥವಾ ಭಾವಚಿತ್ರದ ಫೋಟೋ ಪೂಜಾ ಪರಿಕರಗಳು, ಅಷ್ಟವಿಧಾರ್ಚನೆಗೆ. ಒಂದು ಆಸನ. ಪದ್ಮಾಸನಸ್ತನಾಗಿ ಕುಳಿತಿರಬೇಕು. ಬಲಭಾಗದಲ್ಲಿ ಭುಜದ ಎತ್ತರಕ್ಕೆ ದೀಪ, ಮೊದಲು ೩೨ ಸ್ಥಾನಗಳಲ್ಲಿ ಭಸ್ಮ ಧೂಳನ-ಧಾರಣೆ ಎರಡು ಮುಂಗೈ ಎರಡು ಭುಜ ೩೩(೩೨+೧ಶಿಖಾಮಣಿ) ಕಾಳುಗಳಿದ್ದ ರುದ್ರಾಕ್ಷಿ ಸರ ಕೊರಳಲ್ಲಿ ಧರಿಸಬೇಕು. ನಂತರ ಗುರು ಬಸವ ಪೂಜೆ. ಇದಾದ ನಂತರ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಮಾಡಿ ಲಿಂಗಸ್ತವನಗೈದು (ವಚನ-ಗೀತೆ). ಎಡ ಅಂಗೈ ಲಿಂಗವನ್ನು ಮೂಗಿನ ತುದಿಯಿಂದ ೧೨ ಅಂಗುಲ ಅಂತರದಲ್ಲಿಟ್ಟುಕೊಂಡು ದೀಪದ ಬೆಳಕು ಲಿಂಗದ ಮೇಲೆ ಬೀಳಲು ಅನಿಮಿಷ ದೃಷ್ಟಿಯಿಂದ ಬಲಗೈಯಿಂದ ೧೦೮ (೧೦೮+೧ಶಿಖಾಮಣಿ) ಮಣಿ ಇರುವ

ರುದ್ರಾಕ್ಷಿ ಸರದಿಂದ ಗುರು ಕೊಟ್ಟ ದೇವಮಂತ್ರ (ಓಂ ಲಿಂಗಾಯನಮಃ) ಜಪಗೈಯುತ್ತಾ ಹೋಗಬೇಕು. ಎಷ್ಟು ಹೆಚ್ಚು ಸಮಯ ಹಾಗೂ ಎಷ್ಟು ಹೆಚ್ಚು ದೇವಮಂತ್ರ ಜಪ ಮಾಡುತ್ತೇವೆಯೋ ಅಷ್ಟು ಬೇಗ ಬೇಗ ಏಕಾಗ್ರತೆ ಹೆಚ್ಚುತ್ತಾ ಹೋಗುತ್ತೆ.

ಒಬ್ಬ ಆರೋಗ್ಯವಂತನು/ಳು ದಿನಕ್ಕೆ ೨೪ ತಾಸುಗಳಲ್ಲಿ ೪ ಸೆಕೆಂಡಿಗೆ ಒಂದರಂತೆ ೨೧,೬೦೦ ಸಲ ಉಸಿರಾಟವನ್ನು ಮಾಡುತ್ತಾನೆ/ಳೆ. ಇದಕ್ಕನುಗುಣವಾಗಿ ಶರಣರು ೧೦೮ ರ ರುದ್ರಾಕ್ಷಿ ಜಪಮಾಲೆಯನ್ನು ಹೊಂದಿಸಿದ್ದಾರೆ. ೨೧,೬೦೦ ಸಲ ಉಸಿರಾಡುವ ಉಸಿರು ಮಂತ್ರಮಯವಾಗಲು ವ್ಯವಸ್ಥಿತ ಯೋಜನೆಯನ್ನು ಹಾಕಿ ಕೊಟ್ಟಿದ್ದಾರೆ. ಇದನ್ನು ಚಿತ್ತವಿಟ್ಟು ಗಮನಿಸಿರಿ. ಆಧಾರ ಚಕ್ರದಲ್ಲಿ ೪ ದಳದ ಕಮಲ, ಸ್ವಾಧಿಷ್ಠಾನದಲ್ಲಿ ೬ ದಳದ ಕಮಲ, ಮಣಿಪೂರಕದಲ್ಲಿ ೧೦ ದಳದ ಕಮಲ, ಅನಾಹತದಲ್ಲಿ ೧೨ ದಳದ ಕಮಲ, ವಿಶುದ್ಧಿಯಲ್ಲಿ ೧೬ ದಳದ ಕಮಲ ಮತ್ತು ಆಜ್ಞಾಚಕ್ರದಲ್ಲಿ ದ್ವಿದಳದ ಕಮಲ ಇವೆಲ್ಲ ಸೇರಿದರೆ ೫೦. ೫೦x೪=೨೦೦. ೨೦೦ x೧೦೮=೨೧,೬೦೦

೪×೪=೧೬ ೬×4=24 10×4=40 12×4=48

16×4=64 2×4=8 16×108=1728 ಇದರಂತೆ

ಮೇಲೆ ತಿಳಿಸಿದ ಹಾಗೆ ಆಯಾ ಚಕ್ರಗಳಲ್ಲಿ ಅಷ್ಟಷ್ಟು ದೇವಮಂತ್ರ ಜಪವನ್ನು ಮಾಡುತ್ತಾ ಪ್ರಾಣಶಕ್ತಿಯನ್ನು ಯೋಗದ ಮೂಲಕ ಮೇಲೇರಿಸುತ್ತಾ ಸಹಸ್ರಾರ ಚಕ್ರದ ವರೆಗೆ ಹೋಗಬೇಕು. ದಿನನಿತ್ಯ-ನಿರಂತರ-ಪರಿಶ್ರಮ-ಸಾಧನೆ-ಭಕ್ತಿ-ಶ್ರದ್ಧೆ-ನಿಷ್ಠೆ ಶರಣಾಗತಿಯಿಂದ ಸಾಗಬೇಕು. ಆಗ ನೆತ್ತಿಯ ಭಾಗವಾದ ಸಹಸ್ರಾರ ಚಕ್ರ-ಬ್ರಹ್ಮ-ರಂಧ್ರದಲ್ಲಿದ್ದ ಅಮೃತದ ಕೊಡ ಒಡೆದು ಕೆಳಗಣ ಕಿರುನಾಲಿಗೆಯ ಮುಖಾಂತರ ನಾಲಿಗೆ-ಗಂಟಲು ಹೃದಯಕ್ಕೆ ಬಂದು ತಲುಪಿದಾಗ ಪರಮಾನಂದ-ಮಹದಾನಂದವು ಪ್ರಾಪ್ತಿಯಾಗುವುದು. ಈ ಆನಂದವು "ಸಾಕೆನಿಸದು, ಸವೆಯದು, ಬೇರೊಂದನ್ನು ಬೇಕೆನಿಸದು, ಕೊನೆಯೊಳು ತನ್ನ ಜೋಕೆಗುಂದದೆ ನಿರುಪಮ ಶಂಭುಲಿಂಗದೊಳಗೇಕಮೆನಿಪ ಸುಖಮೊಂದಲ್ಲದೆ" ಆವ ಪರಿಯ ಭಾವಿಸಿ ಬೇರೆನಿಸಿದೊಡೆ ಜೀವ (ಅಂಗ) ಪರಮ (ಲಿಂಗ) ಯೋಗದ ಮಿಜವರಿದ ಅನುಭವಿಯ ಸುಖಕ್ಕೆ ಸರಿಗಾಣೆ" ಎಂದು ಶ್ರೀಮನ್ ನಿಜಗುಣ ಶಿವಯೋಗಿಗಳು, ಅನುಭಾವಿಗಳ ನಿಲುವನ್ನು ಅರುಹಿದ್ದಾರೆ.

ಲೌಕಿಕವಾದ ಒಂದು ಉದಾಹರಣೆಯನ್ನು ಕೊಟ್ಟರೆ ಸಾಧನಾ ಪಥವು ಹಗುರವಾಗುವುದು. ಒಂದು ಆಳವಾದ ಸೇದುವ ಭಾವಿ ಇದೆ. ಗಡಗಡಿ, ಹಗ್ಗ, ಕೊಡ ಎಲ್ಲ ವ್ಯವಸ್ಥೆ ಇದೆ. ಆದರೆ ಯಾರಾದರೂ ಸ್ವತಃ ಭಾವಿಯಲ್ಲಿ ಹಗ್ಗದ ಸಹಾಯದಿಂದ ಕೊಡವನ್ನು ಬಿಟ್ಟು ನೀರು ಪಡೆಯಬೇಕಾಗಿದೆ. ಮೊದಲಸಲ ಕೊಡ ಕೆಳಗೆ ಬಿಟ್ಟು ನೀರು ತುಂಬಿದ್ದನ್ನು ಗಮನಿಸಿ ಮೇಲೆ ಎತ್ತುತ್ತಾನೆ. ಕಾಲುಭಾಗ ಬಂದಾಗ ಆಯಾಸವಾಗುತ್ತೆ. ಆಗ ಕೆಲಗೆ ಬಿಡದೇ ಉಸಿರು ಗಟ್ಟಿಹಿಡಿದು ನಿಲ್ಲುತ್ತಾನೆ. ೨-೩ ನಿಮಿಷ ಸಾವರಿಸಿಕೊಂಡು, ಅರ್ಧ ಭಾಗ ಮತ್ತೆ ಸಾವರಿಸಿಕೊಂಡು ಮುಕ್ಕಾಲು ಭಾಗ. ಕೊನೆಗೆ ಪೂರ್ಣ ಮೇಲಕ್ಕೆ ಎತ್ತಿ ನೀರು ಒಂದರಲ್ಲಿ ಸುರುವಿ ಇಟ್ಟುಕೊಳ್ಳುತ್ತಾನೆ. ಒಂದು ಸಲ, ಎರಡು ಮೂರು, ನಾಲ್ಕು, ಐದು ಸಲ ಹಾಗೂ ಒಂದುದಿನ, ಎರಡುದಿನ

ಹೀಗೆ ಎಂಟುದಿನದವರೆಗೆ ನೀರನ್ನು ಎತ್ತುತ್ತಾ ಹೋದಾಗ, ಬಲವಾದ ಪ್ರಯತ್ನದಿಂದ ಒಂದರೆಡು ನಿಮಿಷದಲ್ಲಿ ನೀರು ತುಂಬಿ ಎಳೆದೆಳೆದು ಶೇಖರಿಸುತ್ತಾನೆ.

ಈ ಮೇಲೆ ಹೇಳಿದ ತೆರನಾಗಿ ಪ್ರಾಣ ಶಕ್ತಿಯನ್ನು ಕೆಳಗಡೆ ಆಧಾರ ಚಕ್ರ (ಆಧಾರಸ್ಥಾನ) ದಿಂದ ನಿಧಾನವಾಗಿ ಮೇಲೇರಿಸುತ್ತಾ ಸಹಸ್ರಾರದ ವರೆಗೆ ಹೋದಾಗ ಅಮೃತವು ಪ್ರಾಪ್ತಿಯಾಗುವುದು. ಆಗ ಮಾತ್ರ ಭವಘೋರ ದುಃಖ ತಪ್ಪುವುದು. ಇದು ಲಿಂಗದೇವ (ಪರಮಾತ್ಮ) ನೊಡನೆ ಒಡವೆರೆದು ಒಂದಾಗುವ ಸುಲಭ-ಸರಳ ಪಥ.




ಪುಟಾಣಿ ಪ್ರಪಂಚ

ಬ್ರಹ್ಮಪುರವೆಂಬ ಪಟ್ಟಣದ ಜನರು ತುಂಬಾ ಭಯಭೀತರಾಗಿದ್ದರು. ಏಕೆಂದರೆ ಸಮೀಪದಲ್ಲಿದ್ದ ಪರ್ವತದ ತುದಿಯಲ್ಲಿ ಘಂಟಾಕರ್ಣನೆಂಬ ರಾಕ್ಷಸನಿರುವನೆಂದು ಅವರು ನಂಬಿದ್ದರು. ಆ ಪ್ರದೇಶದಲ್ಲಿ ಆಗಾಗ ಗಂಟೆಯ ಸಪ್ಪಳವೂ ಕೇಳಿಬರುತ್ತಿತ್ತು. ಆದ್ದರಿಂದ ಯಾರೂ ಆ ಕಡೆ ಸುಳಿಯುತ್ತಿರಲಿಲ್ಲ. ಘಂಟಾಕರ್ಣನು ಜನರನ್ನು ತಿನ್ನುತ್ತಾನೆ ಎಂಬ ಸುದ್ದಿ ಹಬ್ಬಲು ಜನರು ಊರು ಬಿಟ್ಟು ಹೋಗತೊಡಗಿದರು. ಅಲ್ಲಿಯ ಅರಸನು ಬಹಳ ಚಿಂತಾಕ್ರಾಂತನಾದನು. ಯಾರಾದರೂ ಘಂಟಾಕರ್ಣನ ಕಾಟವನ್ನು ತಪ್ಪಿಸಿದರೆ ಹೇರಳ ಹಣವನ್ನು ಕೊಡುವುದಾಗಿ ಅರಸ ಡಂಗುರ ಸಾರಿಸಿದನು. ಯಾರು ಆ ಸಾಹಸಕ್ಕೆ ಹೊರಡಲಿಲ್ಲ. ಕೊನೆಗೆ ಒಬ್ಬಳು ವೃದ್ಧೆಗೆ ಡಂಗುರದ ಸುದ್ದಿ ತಿಳಿಯಿತು. ಅವಳು ಜನರ ಮಾತನ್ನು ನಂಬಲಿಲ್ಲ. ತನ್ನ ದೈವವನ್ನು ಪರೀಕ್ಷಿಸಬೇಕೆಂದು ಅವಳು ಧೈರ್ಯದಿಂದ ಕಾಡಿಗೆ ಹೊರಟಳು. ಬಹುದೂರ ನಡೆದಾಗ ದೂರದಲ್ಲಿದ್ದ ಮರದ ಮೇಲಿನ ಮಂಗಗಳು ಗಂಟೆ ಬಾರಿಸುತ್ತಿರುವುದು ಕಣ್ಣಿಗೆ ಬಿತ್ತು. ವೃದ್ಧೆಗೆ ನಿಜಸ್ಥಿತಿಯ ಅರಿವಾಯಿತು. ಕೂಡಲೇ ವೃದ್ಧೆಯು ರಾಜನ ಬಳಿಗೆ ಬಂದು ಘಂಟಾಕರ್ಣನ ಕಾಟವನ್ನು ನಾನು ತಪ್ಪಿಸುವೆನು ಎಂದಳು. ಅರಸನಿಗೆ ಆಶ್ಚರ್ಯವಾಯಿತು. ಏಕೆಂದರೆ ಇಂತಹ ಧೈರ್ಯವನ್ನು ಇದುವರೆಗೆ ಯಾರೂ ಮಾಡಿರಲಿಲ್ಲ. ಆದ್ದರಿಂದ ವೃದ್ಧೆಯ ಮಾತಿಗೆ ಅರಸ ಒಪ್ಪಿದ.

ವೃದ್ಧೆಯು ಅಡವಿಗೆ ಧೈರ್ಯದಿಂದ ನಡೆದಳು. ಈಗಂತೂ ಅವಳಿಗೆ ಯಾವ ಅಂಜಿಕೆಯೂ ಇರಲಿಲ್ಲ. ಗಂಟೆಯನ್ನು ಬಾರಿಸುತ್ತ ಕೋತಿಗಳು ಕುಳಿತ ಮರದಡಿಗೆ ಬಂದು, ನೆಲದ ಮೇಲೆ ಹಣ್ಣು ಹಂಪಲುಗಳನ್ನು ಹರವಿಡಲು ಕೂಡಲೇ ಮರದ ಮೇಲಿದ್ದ ಕಪಿಗಳು ಗಂಟೆಯನ್ನು ಎಸೆದು ಹಣ್ಣು ತಿನ್ನಲೆಂದು ಕೆಳಗೆ ಬಂದವು. ವೃದ್ಧೆಯು ಗಂಟೆಯನ್ನು ತೆಗೆದುಕೊಂಡು ಹೋಗಿ ಬಿಟ್ಟಳು. ಅಂದಿನಿಂದ ಮುಂದೆಂದೂ ಗಂಟೆಯ ಸದ್ದು ಯಾರಿಗೂ ಕೇಳಿಬರಲಿಲ್ಲ.

ಅರಸನು ಸಂತುಷ್ಟನಾಗಿ ಅವಳಿಗೆ ಹೇರಳ ಸಂಪತ್ತನ್ನು ನೀಡಿದನು. ಪ್ರಜೆಗಳು ವೃದ್ಧೆಯ ಉಪಕಾರವನ್ನು ನೆನೆಯುತ್ತಾ ನೆಮ್ಮದಿಯಿಂದಿದ್ದರು. ಆದ್ದರಿಂದ ಯಾವುದನ್ನು ಸಂಪೂರ್ಣವಾಗಿ ವಿಚಾರ ಮಾಡದೆ ನಂಬಬಾರದು.



ಅಷ್ಟಾವರಣ

– ಮಾತೆ ಸತ್ಯಾದೇವಿ

ಬಸವ ಪ್ರಣೀತವಾದ ಲಿಂಗಾಯತ ಧರ್ಮ ಪುರುಷನ ಅಂಗ (ದೇಹ) ಅಷ್ಟಾವರಣ, ಪ್ರಾಣ–ಷಡಾಚಾರ ಆತ್ಮ ಷಟಸ್ಥಲವೆಂದು ಪರಿಗಣಿತವಾಗಿದೆ.

ಆತ್ಮವೆಂಬುದು ಹೊಲದಲ್ಲಿಯ ಬೆಳೆ ಇದ್ದ ಹಾಗೆ. ಈ ಬೆಳೆಯು ಬೆಳೆದು ಫಲ ಕೊಡಬೇಕಾದರೆ (ಪರಮಾನಂದ) ಷಡಾಚಾರಗಳು ಎನ್ನುವ ನೀರು, ಗೊಬ್ಬರ ಹಾಕಿ ಎಣ್ಣೆ ಹೊಡೆದು ಕುಂಟಿ ರಂಟಿ ಮಾಡಿದಾಗ ಆತ್ಮವೆಂಬ ಬೆಳವಣಿಗೆ ಆಗುತ್ತದೆ. ಈ ಬೆಳೆದ ಬೆಳೆಯನ್ನು ರಕ್ಷಣೆ ಮಾಡಲು ಹೊಲದ ಸುತ್ತಲೂ ಬೇಲಿ ಇರಬೇಕಾಗುತ್ತೆ ಬೇಲಿ ಇರಲಿಲ್ಲಾ ಅಂದರೆ ದನಗಳು ಬಂದು ಬೆಳೆಯನ್ನು ನಾಶ ಮಾಡುತ್ತವೆ. ಹಾಗೇ ಆತ್ಮವೆಂಬ (ಷಟಸ್ಥಲ) ಬೆಳೆಯನ್ನು "ಪಶುಗಳು ನಾಶ ಮಾಡುತ್ತವೆ. ಅವು ಯಾವವು ಎಂದರೆ ಪಂಚೇಂದ್ರಿಯಗಳು (ಕಿವಿ, ಮೂಗು, ನಾಲಿಗೆ ಚರ್ಮ) ಅದಕ್ಕಾಗಿ ಅಲ್ಲಮ ಪ್ರಭುಗಳು ಹೇಳುತ್ತಾರೆ. "ಪಶುಗಳು ಐವರು ಹಸಗೆಡಿಸಿಹರೆಂದು ಆವಾಗಲೂ ಈ ತೋಟದಲ್ಲಿ ಜಾಗರವಿದ್ದು ಸಸಿಯ ಸಲಹಿದೇನು ಕಾಣಾ ಗುಹೇಶ್ವರ" ಎಂದು, ಹಾಗಾಗಿ ಷಟಸ್ಥಲವು ತತ್ವಜ್ಞಾನವಾದರೆ, ಆ ತತ್ವಜ್ಞಾನವನ್ನು ಕಾರ್ಯಾಚರಣೆಗೊಳಿಸುವ ತಂತ್ರಜ್ಞಾನ ಅಷ್ಟಾವರಣ ಇವು ಸಾಧಕನ ಸಾಧನೆಯಲ್ಲಿ ಸಂವಾಹಕ ಕಾರ್ಯ ನಿರ್ವಹಿಸುತ್ತವೆ. ಇಲ್ಲಿ ಮುಖ್ಯವಾಗಿ ಶರಣರು ಆಚಾರಕ್ಕೆ ಮಹತ್ವವನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಒಂದು ಧರ್ಮಕ್ಕೆ ಆಚಾರ+ವಿಚಾರ ಎನ್ನುವಂತಹ ಎರಡು ಭಾಗಗಳಿರುತ್ತವೆ. ಒಂದು ವೇಳೆ ಆಚಾರ ಸಂಹಿತೆ ಇಲ್ಲದೆ, ಕೇವಲ ವಿಚಾರ ಮಾತ್ರ ಇದ್ದರೆ ಅದು ತತ್ವಜ್ಞಾನ ಅನ್ನಿಸಿಕೊಳ್ಳುತ್ತದೆ. ವಿನಹ ಧರ್ಮವೆನಿಸಿಕೊಳ್ಳುವುದಿಲ್ಲ. ಉದಾಹರಣೆಯಾಗಿ ಒಂದು ಬೀಜವನ್ನು ನಾವು ಭೂಮಿಯಲ್ಲಿ ಬಿತ್ತಿ ಅದಕ್ಕೆ ನೀರನ್ನು ಎರೆದು, ಗೊಬ್ಬರವನ್ನು ಹಾಕಿ, ಸೂರ್ಯಕಿರಣವನ್ನು ಕೊಟ್ಟಾಗ ಅದು ಮೊಳಕೆಯೊಡೆದು ಸಸಿಯಾಗಿ ಮರವಾಗಿ ಹೂವನ್ನೋ, ಕಾಯಿಯನ್ನೋ, ಹಣ್ಣನ್ನೋ ಕೊಡುತ್ತದೆ.

ಅದೇ ರೀತಿ ಸಿದ್ಧಾಂತ ಅಥವಾ ವಿಚಾರ ತತ್ವಜ್ಞಾನ ಎನ್ನುವಂತಹ ಬೀಜವನ್ನು ನಮ್ಮ ಜೀವನದಲ್ಲಿ ನಾವು ಬಿತ್ತಿಕೊಂಡು ಅದಕ್ಕೆ ಭಕ್ತಿ ಎನ್ನುವ ನೀರನ್ನು ಎರೆದು, ಸದಾಚಾರ ಎನ್ನುವಂತಹ ಗೊಬ್ಬರವನ್ನು ಹಾಕಿ ಜ್ಞಾನದ ಕಿರಣಗಳನ್ನು ಅದಕ್ಕೆ ಹರಿಯಬಿಟ್ಟಾಗ ಮಾತ್ರ ಅದು ಆಚಾರವಾಗಿ ರೂಪುಗೊಂಡು ಅನುಭವದ ಫಲಗಳನ್ನು ಕೊಡಲು ಸಾಧ್ಯವಾಗುತ್ತದೆ. ಇಲ್ಲದೆ ಇದ್ದರೆ ಕೇವಲ ವಿಚಾರವಾಗಿ ಉಳಿದು ಅದು ಅನುಷ್ಠಾನ ಮಾಡುವಂತಹ ಅಧ್ಯಾತ್ಮ ಜೀವಿಗಳ ಅನುಭವಗಳನ್ನು ರೂಪುಗೊಳಿಸುವುದಿಲ್ಲ. ಅದಕ್ಕಾಗಿ ಅಕ್ಕಮಹಾದೇವಿತಾಯಿಯವರು ತಮ್ಮ ವಚನದಲ್ಲಿ ಹೀಗೆ ಹೇಳುತ್ತಾರೆ.

"ಅಕ್ಕಿ ಇಲ್ಲದ ತುಷಕ್ಕೆ ಅಗ್ಘವಣಿಯನೆರೆದರೆ ಅದೆಂದಿಗೆ ಬೆಳೆದು ಫಲವಪ್ಪುದು? ಎಂದು ಕೇಳುತ್ತಾರೆ. ಒಂದು ಭತ್ತದ ಕಾಳನ್ನು ತೆಗೆದುಕೊಂಡು ಕವಚ ಬೇರೆ ಒಳಗಿನ ಅಕ್ಕಿ ಬೇರೆ ಮಾಡಿ ಭೂಮಿಯಲ್ಲಿ ಬಿತ್ತಿದಾಗ ಅದು ಬೆಲೆ ಕೊಡಲಾರದು. ಇವೆರಡೂ ಸೇರಿದ ಅಖಂಡ ಭತ್ತವನ್ನು ಬಿತ್ತಿದಾಗ ಬೆಳೆ ಬರುವುದು ಹಾಗೇ ಒಂದು ಧರ್ಮಕ್ಕೆ ವಿಚಾರ ಎನ್ನುವುದು ಒಂದು ಅಕ್ಕಿಕಾಳು ಇದ್ದ ಹಾಗೆ. ಆಚಾರ ಎನ್ನುವುದು ಮೇಲಿನ ಕವಚ ಇದ್ದಹಾಗೆ. ವಿಚಾರ ಎನ್ನುವ ಅಕ್ಕಿ ಕಾಳಿಗೆ ಆಚಾರ ಎನ್ನುವಂತಹ ಕವಚದ ರಕ್ಷಣೆ ಇರುತ್ತದೆ. ಆಚಾರ ಎನ್ನುವಂತಹ ಕವಚಕ್ಕೆ ವಿಚಾರ ಎನ್ನುವಂತಹ ಕಾಳಿನ ಸತ್ವ ತುಂಬಿರುತ್ತದೆ. ಅಂತರಂಗದಲ್ಲಿ ಅರಿವು ಇರಬೇಕು. ಬಹಿರಂಗದಲ್ಲಿ ಕ್ರಿಯೆ ಇರಬೇಕು. ಇವೆರಡರಲ್ಲಿ ಒಂದು ಇದ್ದು ಒಂದು ಇಲ್ಲದಿದ್ದರೆ ಬಾಗಿಲ ಇದ್ದರೆ ಒಳಗೆ ಹೆಗ್ಗಣವಿಟ್ಟು ಮೇಲೆ ಗುದ್ದು ಬಡಿದಂತೆ ಆಗುತ್ತದೆ. ಅಂತರಂಗದಲ್ಲಿ

ಅರಿವಾದಡೇನಯ್ಯ? ಬಹಿರಂಗದಲ್ಲಿ ಕ್ರಿಯೆಯಿಲ್ಲದನ್ನಕ್ಕ" ಎಂದು ಚೆನ್ನಬಸವಣ್ಣನವರು ತಿಳಿಪಡಿಸುತ್ತಾರೆ. "ಆಚಾರದಂತೆ ವಿಚಾರ, ವಿಚಾರದಂತೆ ವಿಹಾರ" ನಮ್ಮ ಆಚಾರ ಹೇಗಿರುತ್ತದೋ ಹಾಗೇ ವಿಚಾರವಿರುತ್ತದೆ. ವಿಚಾರ ಹೇಗಿರುತ್ತದೋ ಹಾಗೆ ನಮ್ಮ ಬದುಕು ಸಾಗುತ್ತದೆ. ಹಾಗಾಗಿ ಮುಖ್ಯವಾಗಿ ಶರಣರು ಆಚಾರಕ್ಕೆ ಮಹತ್ವವನ್ನು ಕೊಡುತ್ತಾರೆ. ವಿಚಾರಕ್ಕೂ ಅತೀ ಮುಖ್ಯವಾದ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಒಳ್ಳೆಯ ಆಚಾರ, ಒಳ್ಳೆಯ ವಿಚಾರ ಇವೆರಡೂ ಮಾನವನ ಕಣ್ಣುಗಳಿದ್ದಂತೆ ಆಚಾರ+ವಿಚಾರಗಳ ಸಂಯೋಗದಿಂದ ಅನುಭವ ಉಂಟಾಗುತ್ತದೆ. ಈ ಅನುಭವಕ್ಕೆ ಸಿಗುವುದೇ ಪರಮಾನಂದದ ಫಲ (ಪರಮಾತ್ಮ). ಇಂತಹ ನಿಲುವಿಗೆ ಕರೆದೊಯ್ಯುವುದೇ ಆಚಾರ, ಈ ಆಚಾರಕ್ಕೆ ಸಹಾಯಕವಾದಂತಹ ಎಂಟು ತತ್ವಗಳೇ ಅಷ್ಟಾವರಣಗಳು.

ಈ ಅಷ್ಟಾವರಣಗಳು ಯಾವವು ಅಂದರೆ ಗುರುಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಮಂತ್ರ ಕರುಣೋಧಕ, ಕರುಣ ಪ್ರಸಾದ, ಅಷ್ಟಾವರಣಗಳು ಎಂಬ ಬೀಜ ಪಂಚಾಚಾರಗಳು ಎಂಬ ವೃಕ್ಷ, ಷಟಸ್ಥಲಗಳು ಎಂಬ ಹಣ್ಣು ಇವೆಲ್ಲವೂ ಸೇರಿ ದೇವ ಕಾರುಣ್ಯವನ್ನು ಕೊಡಿಸುತ್ತವೆ. ನಾವು ಮೊದಲನೆಯ ಹಂತದಲ್ಲಿ ಒಂದು ಮಾತನ್ನು ತಿಳಿದುಕೊಳ್ಳಬೇಕಾಗುತ್ತದೆ. ಗುರು ಎನ್ನುವ ಪದವಾಗಲಿ, ಲಿಂಗ ಎನ್ನುವ ಪದವಾಗಲಿ, ಜಂಗಮ ಎನ್ನುವ ಪದವಾಗಲಿ, ಈ ವಿಭೂತಿ ರುದ್ರಾಕ್ಷಿ ಎಂಬ ಎಲ್ಲಾ ಶಬ್ದಗಳು ಮೊದಲು ಇದ್ದವು ಎಂಬುವುದಿಲ್ಲಾ. ಇವು ಈ ಜಗತ್ತಿನ ಮೊಟ್ಟಮೊದಲ ಯೋಗ ಗುರು, ನಾಟ್ಯ ಗುರುನಾದಂತಹ ಶಿವನಿಂದ ಹುಟ್ಟಿದವು. ಪ್ರಪ್ರಥಮನಾದ ಯೋಗಿರಾಜನಾದ ಶಿವನಿಂದ ಹುಟ್ಟಿದ ಬಳಿಕ ಈ ಎಲ್ಲಾ ಪದಗಳು ಕೂಡಾ ಬಳಕೆಯಲ್ಲಿದ್ದವು. ಆದರೆ ಈ ಎಲ್ಲವುಗಳನ್ನು ಅಷ್ಟಾವರಣ ರೂಪದಲ್ಲಿ ಹೊಂದಿಸಿ ಅರ್ಥದ ಅರಿವನ್ನು ಕೊಟ್ಟು ಲಿಂಗಾಯತ ಧರ್ಮದ ಆಚಾರಕ್ಕೆ ಹೊಂದುವಂತೆ ಮಾಡಿದವರು ಆದಿಗುರು ಧರ್ಮಪಿತ ಅಪ್ಪ ಗುರು ಬಸವಣ್ಣನವರು. ಅದಕ್ಕಾಗಿ ಶೂನ್ಯಪೀಠಾಧೀಶ ಅಲ್ಲಮ ಪ್ರಭುಗಳು ಹೀಗೆ ಹೇಳುತ್ತಾರೆ.

"ಗುರುವಿನ ಪೂರ್ವಾಶ್ರಯದ ಕಳೆಯಲೆಂದು ಬಸವಣ್ಣ ಗುರು ಪ್ರಾಣಿಯಾದ
ಲಿಂಗದ ಪೂರ್ವಾಶ್ರಮವ ಕಳೆಯಲೆಂದು ಬಸವಣ್ಣ ಲಿಂಗಪ್ರಾಣಿಯಾದ
ಜಂಗಮದ ಪೂರ್ವಾಶ್ರಯವ ಕಳೆಯಲೆಂದು ಬಸವಣ್ಣ ಜಂಗಮಪ್ರಾಣಿಯಾದ
ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು ಬಸವಣ್ಣ ಪ್ರಸಾದ ಜೀವಿಯಾದ
ಇಂತೀ ಪೂರ್ವಾಚಾರಿಯಾದ ಸಂಗನ ಬಸವಣ್ಣನ ಶ್ರೀ
ಪಾದಕ್ಕೆ ನಮೋ ನಮೋ ಎಂಬೆನು ಕಾಣಾ ಗುಹೇಶ್ವರ. ಎಂದು ಹೇಳುತ್ತಾರೆ.

ಉದಾರಣೆಯಾಗಿ ನಾವು ಗುರು ಬಸವಣ್ಣನವರ ಫೋಟೋಕೆ ಒಂದು ಸುಗಂಧರಾಜ ಹೂವಿನ ಮಾಲೆಯನ್ನು ಹಾಕಿದ್ದೇವೆ. ಈ ಸುಗಂಧರಾಜ ಹೂವಿನ ಹಾರದಲ್ಲಿ ಗುಲಾಬಿ ಹೂ ಇವೆ, ಚೆಂಡು ಹೂವು ಇವೆ, ಫನ್ನೀರಿನ ಎಲೆಗಳು ಇವೆ. ಒಂದು ವಿಚಾರ ಮಾಡಿ; ಇವೆಲ್ಲ ಒಂದೇ ಗಿಡದಲ್ಲಿ ಬೆಳೆದಿರುತ್ತವೆಯೆ? ಇಲ್ಲ ಚೆಂಡು ಚೆಂಡು ಹೂವಿನ ಗಿಡದಲ್ಲಿ, ಸುಗಂಧರಾಜ ಸುಗಂಧರಾಜ ಗಿಡದಲ್ಲಿ, ಗುಲಾಬಿ ಹೂವು ಗುಲಾಬಿ ಹೂವಿನ ಗಿಡದಲ್ಲಿ, ಫನ್ನೀರಿನ ಎಲೆಗಳು ಫನ್ನೀರಿನ ಗಿಡದಲ್ಲಿ ಹೀಗೆ ಒಂದೊಂದು ಒಂದೊಂದು ಕಡೆ ಬೆಳೆದರೂ ಇವೆಲ್ಲವೂ ಒಂದೇ ಮಾಲೆಯಲ್ಲಿ ಹೇಗೆ ಸೇರ್ಪಡೆಯಾಗಿವೆ. ಯಾರೋ ಒಬ್ಬ ಜಾಣ ಮಾಲೆಗಾರ ಅಥವಾ ಮಾಲೆಗಾರ್ತಿ ಈ ಎಲ್ಲವನ್ನು ಒಂದು ದಾರದಲ್ಲಿ ಬಂಧಿಸಿ ಸುಂದರವಾದ ಮಾಲೆಯನ್ನು ಮಾಡಿ ಕೊಟ್ಟಾಗ ನಾವು ಅದನ್ನು ಗುರುಬಸವಣ್ಣನವರಿಗೆ ಹಾಕಿದ್ದೇವೆ. ಹಾಗೆಯೇ ಬಸವಣ್ಣನವರು ಎನ್ನುವಂತಹ ಒಬ್ಬ ಅತ್ಯಂತ ಪ್ರತಿಭಾವಂತ ಮಾಲೆಗಾರ ವಿಶಿಷ್ಟ ತತ್ವಜ್ಞಾನ ಎನ್ನುವಂತಹ ಸೂತ್ರವನ್ನು ಹಿಡಿದು ಗುರು ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ,

ಮಂತ್ರ, ಕರುಣೋದಕ, ಕರುಣ ಪ್ರಸಾದವೆಂಬ ಈ ಎಲ್ಲಾ ಹೂವುಗಳನ್ನು ತೆಗೆದುಕೊಂಡು ತನ್ನ ಪ್ರತಿಭೆ ಎನ್ನುವಂತಹ ಪನ್ನೀರಿನ ವಾಸನೆಯನ್ನು ಸೇರಿಸಿ ಲಿಂಗವಂತ ಧರ್ಮ ಎನ್ನುವ ಅಷ್ಟಾವರಣದ ಮಾಲೆಯನ್ನು ಮಾಡಿ ನಮಗೆ ಕೊಟ್ಟಿದ್ದಾರೆ. ಆ ಮಾಲೆಯನ್ನು ಹಾಕಿಕೊಂಡು ಪುನೀತರಾಗುವವರು. ಆ ಮಾಲೆಯನ್ನು ಧರಿಸಲೇಬೇಕು. ಅದಕ್ಕಾಗಿ ಅಕ್ಕಮಹಾದೇವಿಯರು ಹೀಗೆ ಹೇಳುತ್ತಾರೆ.

"ಅಷ್ಟಾವರಣದ ಹಣ್ಣು ಬಟ್ಟ ಬಯಲೊಳಗಿರಲು
ಅಷ್ಟಾಂಗಯೋಗವನು ಮಾಡಿ। ಬಳಲುವರು
ದೃಷ್ಟಿ ಇಡುವುದನು ಮರೆದಿಹರು" ಎಂದು ಹೇಳಿರುತ್ತಾರೆ. ಈ ಮಾಲೆ ಉಳಿದ ಕಡೆ ಸಿಗುವುದಿಲ್ಲ. ಅದು ಶೈವದಲ್ಲಿ ರುದ್ರಾಕ್ಷಿ, ವಿಭೂತಿ, ಮಂತ್ರವುಂಟು. ಆದರೆ ಇಷ್ಟಲಿಂಗವಿಲ್ಲ ಅಲ್ಲಿ ಕೇವಲ ತೀರ್ಥ, ಪ್ರಸಾದವುಂಟೆ ವಿನಹಃ ಕರುಣೋದಕ ಕರುಣಪ್ರಸಾದವಿಲ್ಲ. ಇವೆಲ್ಲ ಗುರು ಬಸವಣ್ಣನವರ ಸಮಕಾಲಿನ ಶರಣರ ತತ್ವವೆಂದು ನಾವು ತಿಳಿದುಕೊಂಡಾಗ ಇದಕ್ಕೆ ಆದ್ಯರು ಗುರು ಬಸವಣ್ಣನವರು ಎಂದು ನಮಗೆ ತಿಳಿದು ಬರುತ್ತದೆ. ಹೀಗೆ ಎಂಟು ಆವರಣಗಳಲ್ಲಿ ಗುರು ಲಿಂಗ ಜಂಗಮ ಇವು ಮೂರು ಉಪಾಸ್ಯ ವಸ್ತುಗಳು, ವಿಭೂತಿ, ರುದ್ರಾಕ್ಷಿ, ಮಂತ್ರ ಇವು ಮೂರು ಉಪಾಸನೆಗೆ ಬರುವಂತಹ ಸಾಧನೆಗಳು. ಗುರು–ಲಿಂಗ–ಜಂಗಮ ಎನ್ನುವಂತಹ ಉಪಾಸ್ಯ ವಸ್ತುಗಳು ವಿಭೂತಿ ರುದ್ರಾಕ್ಷಿ, ಮಂತ್ರ ಎನ್ನುವಂತಹ ಸಾಧನೆಗಳನ್ನು ಸೇರಿಸಿಕೊಂಡು ಪೂಜಿಸಿದಾಗ ಸಿಕ್ಕುವಂತಹ ಫಲಗಳೇ ಕರುಣೋದಕ ಕರುಣ ಪ್ರಸಾದ ಇಂತಹ ಫಲಗಳನ್ನು ಏಕೆ ಇಟ್ಟಿದ್ದಾರೆ ಅನ್ನುವುದನ್ನು ಸ್ವಲ್ಪ ನಾವು ತಿಳಿದುಕೊಳ್ಳೋಣ.

ಉದಾಹರಣೆಯಾಗಿ ಧಾರಾಕಾರವಾಗಿ ಸುರಿಯುವ ಮಳೆಗಾಲದಲ್ಲಿ ಮಳೆಯಿಂದ ರಕ್ಷಣೆ ಪಡೆಯಲು ಛತ್ರಿ ಬೇಕಾಗುತ್ತದೆ. ಅದೇ ರೀತಿ ಚಳಿಗಾಲದಲ್ಲಿ ಚಳಿಯಿಂದ ರಕ್ಷಣೆ ಹೊಂದಲು ಸ್ವೇಟರ್ ಅಥವಾ ಶಾಲು ಬೇಕಾಗುವಂತೆ ಅಧಿಭೌತಿಕ ತಾಪಗಳು ಅಧಿದೈವಿಕ ವಿಘ್ನಗಳು, ಆಧ್ಯಾತ್ಮಿಕ ವಿಘ್ನಗಳು ಜಗತ್ತಿನ ಕಷ್ಟ ಕೋಟಲೆಗಳು ತಾಪತ್ರಯಗಳು ಇವಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕಾದರೆ ಅಷ್ಟಾವರಣಗಳು ಎನ್ನುವ ಛತ್ರಿ ಸ್ವೇಟರ್ ಬೇಕೇ ಬೇಕು. ಅಘಾತಗಳಿಂದಲೂ ಆಂತರಿಕವಾದಂತಹ ಲೋಪ–ದೋಷ ದೌರ್ಬಲ್ಯಗಳಿಂದಲೂ ನಮ್ಮನ್ನು ರಕ್ಷಿಸುವಂತಹ ಸಾಧನೆಗಳೇ ಈ ಅಷ್ಟಾವರಣಗಳು ಕವಚವೆಂದು ನಾವು ತಿಳಿದುಕೊಂಡಾಗ ನಾವು ಅವುಗಳನ್ನು ನಿಷ್ಠೆಯಿಂದ ಧರಿಸಲಿಕ್ಕೆ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಏನು ಹೇಳುತ್ತಾರೆ. ಅಂದರೆ ಬಹಿರಂಗದ ಅಷ್ಟಾವರಣಗಳನ್ನು ಧರಿಸದಿದ್ದರೆ ನಮ್ಮ ಧರ್ಮಾಚರಣೆ ಕೇವಲ ಯಾಂತ್ರಿಕ ಕ್ರಿಯೆ ಎಂದಾಗುತ್ತದೆ. ಆಚಾರ+ವಿಚಾರ ಶುದ್ಧವಾಗಿರಬೇಕು. ಈ ಆಚಾರ+ವಿಚಾರಕ್ಕೆ ಅಷ್ಟಾವರಣಗಳೇ ಬೇಕು ಹಾಗಾಗಿ ಗುರುಬಸವಣ್ಣನವರು ಷಟಸ್ಥಲಗಳನ್ನು, ಪಂಚಾಚಾರವನ್ನು ಅಷ್ಟಾವರಣಗಳನ್ನು ಕೊಟ್ಟರು ಬಸವಣ್ಣನವರೇ ಕೊಟ್ಟರು ಎನ್ನುವುದಕ್ಕೆ ಸಾಕ್ಷಿ ಅಲ್ಲಮ ಪ್ರಭುದೇವರರ ಈ ವಚನ ಸಾಕ್ಷಿ.

"ಆಯಿತ್ತು ಬಸವ ನಿನ್ನಿಂದ ಗುರು ಸ್ವಾಯತವೆನೆಗೆ
ಆಯಿತ್ತು ಬಸವ ನಿನ್ನಿಂದ ಲಿಂಗ ಸ್ವಾಯತವೆನೆಗೆ
ಆಯಿತ್ತು ಬಸವ ನಿನ್ನಿಂದ ಜಂಗಮ ಸ್ವಾಯತವೆನೆಗೆ
ಆಯಿತ್ತು ಬಸವ ನಿನ್ನಿಂದ ಪ್ರಸಾದ ಸ್ವಾಯತವೆನೆಗೆ
ಇಂತೀ ಚತುರ್ವಿಧ ಸ್ವಾಯತವ ನೀನೆ,
ಆಗು ಮಾಡಿದೆಯಾಗಿ ಗುಹೇಶ್ವರ ಲಿಂಗಕ್ಕೆ
ವಿಳಾಸವಾದೆಯಲ್ಲೆ ಸಂಗನ ಬಸವಣ್ಣಾ" ಎಂದು ಮನತುಂಬಿ ನುಡಿಯುತ್ತಾ ಬಸವಣ್ಣನವರಿಂದ

ಗುರು ಲಿಂಗ ಜಂಗಮ ಪ್ರಸಾದಗಳು ಹೊಸ ಅರ್ಥ ಹೊಂದಿದವು. ಆದ್ದರಿಂದ ದೇವ ಪಥದ ಪಥದರ್ಶಿ ಬಸವಣ್ಣ ಎಂದಿದ್ದಾರೆ. ಶರಣರು ಅಂತರಂಗ ಬಹಿರಂಗ ಎರಡಕ್ಕೂ ಮಹತ್ವ ನೀಡಿದರು. ಸಾಧನ–ಸಾಧ್ಯ ಎರಡೂ ಮುಖ್ಯವಾಗಿವೆ. ಬಹಿರಂಗ ಶುದ್ಧಿಯು ಅಂತರಂಗ ಸಿದ್ಧಿಗೆ ಪೂರಕವಾಗಿದೆ. ಕೇವಲ ಅಡಿಗೆ ರುಚಿಯಾಗಿದ್ದರೆ ಸಾಲದು. ಅಡಿಗೆ ತುಂಬಿದ (ತಯಾರಿಸಿದ) ಪಾತ್ರೆಯೂ ಶುಚಿಯಾಗಿರಬೇಕು. ಅದಕ್ಕಾಗಿಯೇ ನಮ್ಮ ತಾಯಂದಿರು ಅಡಿಗೆಯಾದ ನಂತರ ಪಾತ್ರೆಗಳ ಮೇಲ್ಭಾಗವನ್ನು ಸ್ವಚ್ಛಗೊಳಿಸಿ ಮೂರೆಳೆ ಭಸ್ಮವನ್ನು ಹಚ್ಚುತ್ತಾರೆ.

ಅಷ್ಟಾವರಣಗಳು ಕೂಡ ಸಂಸಾರ ಜೀವನದಲ್ಲಿ ಅಂಟಿಕೊಳ್ಳುವ ದೋಷ–ದಾರಿದ್ರ್ಯಗಳಿಂದ ಅವಿದ್ಯೆ ಅಜ್ಞಾನಗಳಿಂದ, ತಾಮಸ–ತಮಂಧದ ಮಾಯೆಯ ಮುಸುಕಿನಿಂದ ವ್ಯಕ್ತಿಯನ್ನು ಮುಕ್ತಗೊಳಿಸಿ ಲಿಂಗಾಂಗ ಸಾಮರಸ್ಯದ ಸುಖದತ್ತ ಮಾರ್ಗದರ್ಶನಗೈಯುತ್ತವೆ.

ಅಷ್ಟಾವರಣದಾಚರಣೆಯಿಂದ ಸಾಧಕನು ದೇಹ–ಮನ, ಬುದ್ಧಿ–ಭಾವಗಳಲ್ಲಿ ಪರಿಶುದ್ಧತೆ ಪಡೆದು, ಮಾಯಾ ಮೋಹದಿಂದ ಮೇಲೆದ್ದು ನಿಲ್ಲುತ್ತಾನೆ. ಅತ್ಯಂತಿಕ ಸುಖದ ಶ್ರೀ ಗಿರಿಯನೇರಲು ನಿರ್ಮಿಸಿದ ಪ್ರಾರಂಭಿಕ ಮೆಟ್ಟಿಲುಗಳೇ ಈ ಅಷ್ಟಾವರಣಗಳು. ಹಾಗಾದರೆ ಅಂತರ ಅಷ್ಟಾವರಣಗಳು ಯಾವುವು? ಎಂಬುದನ್ನು ಆನಂತರ ನೋಡೋಣ.

ಈ ಬಹೀರ್ ಅಷ್ಟಾವರಣದಲ್ಲಿ ಬರುವ ಮೊದಲ ಶಬ್ದ "ಗುರು" ಗುರು ಎಂದರೆ ಯಾರು? ಎಂಥವರಿರಬೇಕು? "ಗು.. "ರು.. ಎಂದರೇನು? ಕಾವಿಯುಟ್ಟವರೆಲ್ಲರೂ ಗುರುಗಳೇ? ಗುರು ಆದವರು ಹೇಗಿರಬೇಕು? ಅವರಿಗೆ ಏನೇನು ಲಕ್ಷಣಗಳಿರಬೇಕು? ಹೀಗೆ ಅನೇಕ ಪ್ರಶ್ನೆಗಳು ನಮ್ಮ ತಲೆಯಲ್ಲಿ ತುಂಬಿರುತ್ತವೆ. ಹಾಗಾದರೆ ಮುಂದುವರೆದ ಭಾಗದಲ್ಲಿ ಗುರುವಿನ ಮಹತ್ವವನ್ನು ನೋಡೋಣಾ

ಸಾಮೂಹಿಕ ಇಷ್ಟಲಿಂಗಾರ್ಚನೆ ಕಾರ್ಯಕ್ರಮ ರದ್ದು

ಶರಣ ಬಂಧುಗಳೇ,

ಬೆಂಗಳೂರು ಮಹಾನಗರದಲ್ಲಿ ಬೃಹತ್ ಪ್ರಮಾಣದಲ್ಲಿ 2017ರ ಮಾರ್ಚ್ 12ರಂದು ಸಾಮೂಹಿಕ ಇಷ್ಟಲಿಂಗಾರ್ಚನೆ ಏರ್ಪಡಿಸುವ ವಿಚಾರವಿತ್ತು. ಬಹಿರಂಗವಾಗಿ ಇನ್ನೂ ಘೋಷಿಸಿರಲಿಲ್ಲ. ಕೆಲವು ಕಾರ್ಯಕ್ರಮಗಳಲ್ಲಿ ಪ್ರಚುರ ಪಡಿಸಲಾಗಿತ್ತು. ನನ್ನ ಆರೋಗ್ಯದಲ್ಲಿ ತುಂಬಾ ಏರುಪೇರು ಆಗುತ್ತಿರುವುದರಿಂದ ಕಾರ್ಯಕ್ರಮದ ಸಿದ್ಧತೆ ಮಾಡಲು ಆಗುತ್ತಿಲ್ಲ. ಜೊತೆಗೆ 1000, 500 ರೂ ನೋಟ್ ಬ್ಯಾನ್‌ನಿಂದಾಗಿ ಜನ ಸಾಮಾನ್ಯರ ಬಳಿ ಹಣದ ಅಭಾವ ತಲೆದೋರಿ ಶರಣ ಮೇಳದ ಸಂಗ್ರಹಕ್ಕೇ ಬಹಳ ತೊಂದರೆಯಾಗಿದೆ. ದೊಡ್ಡ ದಾನಿಗಳ ನೆರವನ್ನು ಪಡೆಯುವುದೂ ಕಷ್ಟಸಾಧ್ಯವೆನಿಸಿದೆ. ಆದ್ದರಿಂದ 2017ರ ಮಾರ್ಚ್ 12ರಂದು ಏರ್ಪಡಿಸಬೇಕೆಂದಿದ್ದ ಸಾಮೂಹಿಕ ಇಷ್ಟಲಿಂಗಾರ್ಚನೆ ಮತ್ತು ರಾಷ್ಟ್ರೀಯ ಬಸವ ದಳದ ರಾಷ್ಟ್ರೀಯ ಸಮಾವೇಶವನ್ನು ರದ್ದು ಮಾಡಲಾಗಿದೆ. ಈ ಬಗ್ಗೆ ನಾವಿನ್ನೂ ಕಾಣಿಕೆ ಸಂಗ್ರಹವನ್ನು ಶುರು ಮಾಡಿರಲಿಲ್ಲ. ಕೇವಲ ಶ್ರೀ ಬಸವಕುಮಾರ ಸ್ವಾಮಿಗಳು ಟಿಕೆಟ್ ಮುದ್ರಿಸಿ ಕಾಣಿಕೆ ಸಂಗ್ರಹ ಮಾಡಿರುವುದಾಗಿ ತಿಳಿದಿದೆ. ಎಲ್ಲ ಪರಿಸ್ಥಿತಿ ಸುಧಾರಿಸಿದ ಮೇಲೆ ಕಾರ್ಯಕ್ರಮವನ್ನು ಸಂಯೋಜಿಸಲಾಗುವುದು.

– ಪೂಜ್ಯ ಮಾತಾಜಿ

ಸ್ವಯಂ ಸೇವಕರಿಗೆ ಕರೆ

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಡುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತ ಧರ್ಮಪಿತರ ಆದೇಶ ಹೀಗಿರುತ್ತದೆ.

ಭಕ್ತನ ಭಕ್ತನು ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷ ಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡಿ ದಾಸೋಹವ ಮಾಡಿದೊಡೆ ಕೂಡಿಕೊಂಬನು ನಮ್ಮ ಲಿಂಗದೇವನ.

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷಗಾವುದ ದೂರವೇ ಇರಲಿ ಸಹಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ -ಮನ ಸೇವೆ-ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವ ಮೆಚ್ಚಿ, ಒಲಿದು ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿ ಇಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆ ಸಂಗ್ರಹಿಸುತ್ತಲಿರಬೇಕು. ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯ ಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಬುದ್ಧಿ ಜೀವಿಗಳಿಗೂ ಸಾಕಷ್ಟು ಕೆಲಸವಿರುತ್ತದೆ. ಶರಣೆಯರಿಗೂ ಸೇವಾ ಕಾರ್ಯ ಸಾಕಷ್ಟು ಇರುತ್ತದೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು.

ಶರಣ ಮೇಳಕ್ಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ,
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ । ಎಂಬುದು ತಮ್ಮೆಲ್ಲರಲ್ಲಿ ಅಚ್ಚೊತ್ತಲಿ.

ಕೂಡಲ ಸಂಗಮದ ವಸತಿ ಧಾಮಗಳಲ್ಲಿ
ಕೊಠಡಿಗೆ ದೇಣಿಗೆ ಕೊಟ್ಟವರಿಗೆ ಸೂಚನೆ

ಕೂಡಲ ಸಂಗಮದ ಬಸವ ಧರ್ಮ ಪೀಠದ ಆವರಣದಲ್ಲಿ ಕೆಲವು ಕೊಠಡಿಗಳು ಸಿದ್ಧವಾಗಿದ್ದು ದಾನಿಗಳಿಗೆ ಕೊಡಮಾಡಬೇಕಾಗಿದೆ. ಆದರೆ ಅನೇಕರು ಕಂತಿನಲ್ಲಿ ಹಣ ತುಂಬಿದ್ದು ನಮಗೆ ಲೆಕ್ಕ ಸಿಗುತ್ತಿಲ್ಲ. ಆದ್ದರಿಂದ ದಾನಿಗಳು ತಾವು ಪಾವತಿ ಮಾಡಿದ ಹಣದ ರಸೀತಿಗಳನ್ನು ತಂದು ತೋರಿಸಬೇಕೆಂದು ಸೂಚಿಸುತ್ತೇವೆ. ರಸೀತಿಗಳ ಹಣ ಟೋಟಲ್ ಮಾಡಿ ಕೌಂಟರಿನಲ್ಲಿ ತೋರಿಸಬೇಕೆಂದು ಸೂಚಿಸುತ್ತೇವೆ.

– ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು

ಶರಣರ ವಚನ ಸಾಹಿತ್ಯದಲ್ಲಿ ಸತಿ ಭಾವ

ಶರಣ.ಮಹಾದೇವ ಗುಡೇರ,

ಮನಕ್ಕೆ ಮನೋಹರವಲ್ಲದ ಗಂಡರು
ಮನಕ್ಕೆ ಬಾರರು ಕೇಳವ್ವಾ ಕೆಳದಿ
ಪನ್ನಗ ಭೂಷಣರಲ್ಲದ ಗಂಡರು
ಇನ್ನೆನಗಾಗದ ಮೋರೆ ನೋಡವ್ವಾ
ಕನ್ನೆಯಂದಿನ ಕೂಟ ಚಿಕ್ಕಂದಿನ ಬಾಳುವೆ
ನಿಮ್ಮಾಣೆಯಯ್ಯಾ, ಕೂಡಲ ಸಂಗಮದೇವಾ

ಮನಕ್ಕೆ ಮನೋಹರವಲ್ಲದ ಗಂಡರು ನನ್ನ ಮನಕ್ಕೆ ಬಾರರು, ಅಂದರೆ ಮನಸ್ಸಿಗೆ ಮುದನೀಡಿ ಮನಗೆಲ್ಲದ ಗಂಡರು ನನ್ನ ಮನಸಿಗೆ ಹಿಡಿಸಲಾರರು ಅದರಲ್ಲಿಯೂ ಪನ್ನಗ ಭೂಷಣರಲ್ಲದ ಅಂದರೆ ಪರಮಾತ್ಮನಿಗೆ ಭೂಷಣವಾದ ಲಿಂಗ ವಿಭೂತಿ, ರುದ್ರಾಕ್ಷಿ, ಶಿವಲಾಂಛನ ಧರಿಸದವರ ಮೋರೆಯನ್ನು ನೋಡಲಾಗದು ಎಂದು ಹೇಳುವ ಈ ಗುರು ಬಸವಣ್ಣನವರ ವಚನದಲ್ಲಿ ನಿಷ್ಕಳಂಕವಾದ ಸತಿಭಾವದ ಸಾಮರಸ್ಯವು ವ್ಯಕ್ತವಾಗುತ್ತದೆ. ಶರಣರ ಇಂತಹ ವಚನ ವಾಙ್ಮಯದಲ್ಲಿ ದೊರೆಯುವ ಆನಂದವು ಬೇರೆ ಕಾವ್ಯ ಪಠಣದಿಂದ ಲಭಿಸುವ ಆನಂದಕ್ಕಿಂತಲ್ಲೂ ಭಿನ್ನವಾಗಿದೆ. ಕಾರಣ ವಚನಗಳಲ್ಲಿ ರತಿಭಾವವಿಲ್ಲ ಇಲ್ಲಿ ಸತಿಭಾವವು ವ್ಯಕ್ತವಾಗುತ್ತದೆ. ಇದು ವಚನ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಅನುಭಾವದ ಆಗರವಾಗಿರುವ ವಚನ ಸಾಹಿತ್ಯವು ಕನ್ನಡ ಭಾಷೆಯ ಹಿರಿಮೆಯನ್ನು ಸಾರುವಂತಾಗಿದೆ.

ಸತಿಭಾವ ಮತ್ತು ರತಿಭಾವ ಇವು ಭಿನ್ನವಾಗಿದ್ದು ರತಿಭಾವ ಕಾಮಮಯ ಶೃಂಗಾರದಿಂದ ಬೆರೆತರೆ ಸತಿಭಾವವು ಪ್ರೇಮಮಯ ಸಾಮರಸ್ಯ ಪ್ರಧಾನವಾದುದ್ದು ನಿರ್ಹೇತುಕ, ನಿಷ್ಕಲಂಕ, ನಿಸ್ಸೀಮವಾದ ಪ್ರೇಮವೇ ಸತಿ, ಶಾಂತವೂ ಶುದ್ಧವೂ ಆಗಿರುವ ಆ ಸತಿಭಾವವೇ ನಿಜ ಭಕ್ತಿಯಾಗಿದೆ. ಭಕ್ತಿಗೆ ಉತ್ಕೃಷ್ಟ ಭಾವವೇ ಬೀಡು. ಶರಣರ ವಚನಗಳಲ್ಲಿ ಭಕ್ತಿಯ ರೀತಿಯನ್ನು ಮನದುಂಬುವಂತೆ ವಿವರಿಸಲಾಗಿದೆ. ರತಿ, ಸತಿ, ಸ್ನೇಹ ಇವುಗಳಲ್ಲಿ ಒಂದು ಬಗೆಯ ಆಕರ್ಷಣೆ ಇದೆ ಇವುಗಳೆಲ್ಲ ತೋರಿಕೆಗೆ ಒಂದು ರೀತಿಯಾಗಿ ಕಂಡರೂ ಇವುಗಳ ಒಳಗಿನ ಮರ್ಮ ಬೇರೆಯಾಗಿದೆ. ಗಂಡು–ಹೆಣ್ಣಿನ ಸ್ನೇಹ ಬೇರೆ ಹಾಗೆ ಜೀವ–ದೇವನಲ್ಲಿಯ ಪ್ರೀತಿ ಸ್ನೇಹ ಬೇರೆ. ಗಂಡು– ಹೆಣ್ಣಿನ ಸ್ನೇಹ ವಿಷಯ ವ್ಯಾಮೋಹದಿಂದ ಕೂಡಿರುತ್ತದೆ. ಇಲ್ಲಿ ವಿಷಯ ವ್ಯಾಮೋಹದ ತೃಪ್ತಿಗೆ ಹೆಚ್ಚಿನ ಪ್ರಾಧಾನ್ಯವಿದೆ. ತೃಪ್ತಿಯಾಗದೇ ಅತೃಪ್ತಿಯಾದರೆ, ಸ್ನೇಹದ ಸರಸವೇ ವಿರಸವಾಗಿ ಮಾರ್ಪಡುತ್ತದೆ. ಭೌತಿಕವಾದ ಸುಖವನ್ನೇ ಗುರಿಯಾಗಿರಿಸಿಕೊಂಡು ಸಾಗುವ ರತಿಭಾವವು ಅಸ್ಥಿರವಾದುದ್ದಾಗಿದೆ, ರತಿಭಾವದಲ್ಲಿ ವಿರತಿ ಎಂಬುದೇ ಇಲ್ಲ ಶರಣರ ವಚನಗಳಲ್ಲಿ ವ್ಯಕ್ತವಾಗುವ ದೇವ– ಭಕ್ತ ಶಿವ– ಜೀವರಲ್ಲಿಯ ಸ್ನೇಹವು, ಪ್ರೇಮವು ನಿರಂತರವಾದುದ್ದಾಗಿದೆ.

"ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ
ಆಲಿಕಲ್ಲ ಹಸೆಯ ಹಾಸಿ
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ
ಗಂಡ ಬಂದು ಮದುವೆಯಾದನು

ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ

ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆ ಕೊಟ್ಟರೆನ್ನ ಮದುವೆಯ ಮಾಡಿದರು, ಅಕ್ಕನ ಈ ವಚನವು ಜೀವ ದೇವನ ನಿರಂತರ ಸ್ನೇಹವನ್ನು ಸೂಚಿಸುತ್ತದೆ. ಈ ನಿರಂತರ ಸ್ನೇಹವೇ ಭಕ್ತಿಯಾಗಿದೆ. ಇಂತಿಪ್ಪ ಭಕ್ತಿಯ ಆಧಾರಸ್ಥಂಬದ ಮೇಲೆ ಭಕ್ತಿ ಎಂಬ ಜಲದ ಮಂಟಪ ಇದರ ಮೇಲೆ ಜ್ಞಾನಾಗ್ನಿ ಎಂಬ ಉರಿಯ ಚಪ್ಪರ ಅಂದರೆ ಹಂದರವನ್ನು ಹಾಕಿ ಸತ್ಕ್ರಿಯೆ ಎಂಬ ಶುಭ್ರವಾದ ಆಲಿಕಲ್ಲ ಹಸೆಯ ಹಾಸಿ ದುಶ್ಚಾರಿತ್ರ್ಯವಿಲ್ಲದ ಕಾಲಿಲ್ಲದ ಹೆಂಡತಿಗೆ ವೃತ್ತಿಜ್ಞಾನವೆಂಬ ತಲೆ ಅಡಗಿದೆ. ಕೇವಲ ಚೈತನ್ಯ ಜ್ಞಾನವನ್ನು ಅಳವಡಿಸಿಕೊಂಡ, ಗಂಡನೊಡನೆ ವಿವಾಹ ಇದು ಯಾವಕಾಲಕ್ಕೂ ಎಂದೆಂದಿಗೂ ಬಿಡದ ಬಾಳುವೆ, ಇದು ನಿರಂತರವಾಗಿರುವುದು ಎಂಬ ಅನುಭಾವ ಅಡಗಿದೆ. ಇದುವೇ ಸತಿಭಾವ.ರತಿಭಾವದಲ್ಲಿ ಕೇವಲ ಭ್ರಾಂತಿಯು ತುಂಬಿದೆ. ಅದೇ ಸತಿಭಾವದಲ್ಲಿ ಒಂದುತರದ ಶಾಂತಿಯು ನೆಮ್ಮದಿಯು ಒಳಮೂಡುತ್ತದೆ. ಸತಿಭಾವದ ಸೃಷ್ಟಿಯಲ್ಲಿ ನಿಗೂಢವಾದ ಅಗಮ್ಯ ಆಳವಾದ ಧರ್ಮದ ಲವಲೇಶವೂ ರತಿಭಾವದಲ್ಲಿ ಕಾಣಲಾರದು. ಆದ್ದರಿಂದ ಈ ಸತಿ, ರತಿ, ಸ್ನೇಹ ಇವುಗಳ ಶಬ್ಧಾರ್ಥದಲ್ಲಿ ಒಂದೇ ವರ್ಗದ ಭಾವನೆಗಳು ಎಂದೂ ಆಗಲಾರವು. ರತಿಗಿಂತ ಮಿತ್ರ-ಮಿತ್ರರ ಸ್ನೇಹ ಹಾಗೂ ಅದಕ್ಕಿಂತಲೂ ಜೀವ, ದೇವರ ನಿರಂತರ ಸ್ನೇಹವು ಮಿಗಿಲಾದುದ್ದಾಗಿದೆ. ಶರಣರು ಲಿಂಗ ಪತಿ, ಶರಣ ಸತಿ ಎಂಬ ಒಂದಲಗಿನಿಂದ ಸತಿಭಾವವನ್ನು ಸಾಧಿಸಿದರು. ಇಂಥ ಈ ಸಾಧನೆಯಿಂದ ಜೀವ ಪ್ರಪಂಚದ ಘಟಿಕಾವಯವಗಳನ್ನು ಶಿವಪ್ರಪಂಚದ ಘಟಕಾವಯವದಲ್ಲಿ ಮಾತಾಡಿಸಿದರು. ಕಾಮ ಕ್ರೋಧಾದಿ ಷಡ್ವೈರಿಗಳು ಒಂದಿಲ್ಲೊಂದು ರೂಪದಲ್ಲಿ ತೋರುತ್ತವೆ ಎಂಬುದನ್ನು ಮನಗಂಡು ಈ ಕಾಮ ಕ್ರೋಧಾದಿಗಳನ್ನು ತಮ್ಮ ಸಾಧನೆಯಲ್ಲಿ ಸದುಪಯೋಗ ಮಾಡಿಸಿಕೊಳ್ಳುವ ಸಮ್ಯಕ್ ದೃಷ್ಟಿಯನ್ನು ಶರಣರು ಸಂಪಾದಿಸಿಕೊಂಡರು.

ಕಾಮ ಬೇಕು ಲಿಂಗದಲ್ಲಿ, ಕ್ರೋಧಬೇಕು ಕರಣಂಗಳಲ್ಲಿ, ಲೋಭಬೇಕು ಪಾದೋದಕ ಪ್ರಸಾದದಲ್ಲಿ, ಮೋಹ ಬೇಕು ಗುರು ಲಿಂಗ ಜಂಗಮದಲ್ಲಿ, ಮದ ಬೇಕು ಶಿವಾಚಾರ ಘನವೆಂಬಲ್ಲಿ, ಮತ್ಸರ ಬೇಕು ಹೊನ್ನು, ಹೆಣ್ಣು- ಮಣ್ಣಿನಲ್ಲಿ, ಇಂತೀ ಷಡ್ವಿಧ ಗುಣವನರಿದು ಮೆರೆಯಬಲ್ಲಡೇ ಆತನೇ ಸದ್ಭಕ್ತಕಾಣಾ ಕೂಡಲಚನ್ನಸಂಗಮದೇವಾ, ಎಂಬ ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಹೇಳುವ ಈ ವಚನದಲ್ಲಿ ಷಡ್ವಿಧ ಗುಣಗಳಾದ ಕಾಮ ಕ್ರೋಧಾದಿಗಳನ್ನು ಸಾಧನೆಗೆ ಸಹಕಾರಿಯಾಗುವಂತೆ ಮಾರ್ಪಾಟು ಮಾಡಿಕೊಳ್ಳುವ ಉದಾತ್ತೀಕರಣದ ಭಾವನೆಯನ್ನು ಬಿಂಬಿಸಿದ್ದಾರೆ. ಪ್ರೇಮವನ್ನು ಪರಸ್ತ್ರೀಯಲ್ಲಿ ಇಟ್ಟಾಗ ಅದು ಕಾಮವಾಗಿಯೂ, ಕಾಮವನ್ನು ಲಿಂಗದಲ್ಲಿಟ್ಟಾಗ ಅದು ನಿಜವಾದ ಪ್ರೇಮವಾಗಿಯೂ ಪರಿಣಮಿಸುತ್ತದೆ.

" ನಿಮ್ಮ ನೋಟವನಂತ ಕೋಟಿಸುಖ ಕೂಟ ಪರಮಸುಖ
ಅವುಟಕೋಟಿ ರೋಮಂಗಳೂ ಕಂಗಳಾಗಿ ನೋಡುತ್ತಿದ್ದೆನು
ಕೂಡಲ ಸಂಗಮದೇವಯ್ಯಾ"

'ಎನ್ನ ಸರ್ವಾಂಗವನು ನಿನ್ನ ಪರಿಣಾಮಕ್ಕೆ ಚನ್ನಾಗಿ ಸಲಿಸುವೆನು ಎಲೆ ಲಿಂಗವೇ.' ಎಂಬಿತ್ಯಾದಿ ವಚನಗಳಲ್ಲಿ ಭಕ್ತಿ ಪ್ರೇಮದ ಸತಿಭಾವ ವ್ಯಕ್ತವಾಗುತ್ತದೆ. ಸಾಧಕ ತನ್ನ ಸರ್ವಾಂಗಗಳಲ್ಲಿ ದಾಸಿ, ತೊತ್ತು, ಹೆಂಗಳೆ, ಕೆಳದಿ, ಎಂಬ ಸತಿಭಾವವನ್ನು ಇಂತಹ ವಚನ ಸಾಹಿತ್ಯವನ್ನು ಓದುವುದರಿಂದ ಉತ್ಕೃಷ್ಟ ಭಾವನಾವಿಕಾಸವು ದೊರೆಕೊಳ್ಳುವುದು.

ಶರಣರ ವಚನಗಳಲ್ಲಿ ಸತಿಭಾವವು ಮೇಲ್ಮೆಯನ್ನು ಪಡೆದಿರುವುದಿಲ್ಲದೇ ಸತಿಭಾವ ಹಾಗೂ ರತಿಭಾವ ಇವುಗಳ ಪರ್ಯವಸಾನವನ್ನು ತಿಳಿಸುತ್ತವೆ. ರತಿಭಾವದಲ್ಲಿ ಮೊದಲ್ಗೊಂಡ ಕಾಮವು ಕ್ರೋಧದೊಳಗೆ, ಲೋಭವು ಮೋಹದಲ್ಲಿ, ಮೋಹವು ಮದದಲ್ಲಿ, ಮದವು ಮತ್ಸರದಲ್ಲಿ, (ಅಸೂಯೆ) ಕಾಣುವುದು. ಆದರೆ ಸತಿಭಾವದೊಳಗೆ ಉಗಮಗೊಂಡ ಪ್ರೇಮವು ಅರ್ಥಾತ್ ಲಿಂಗಪ್ರೇಮವು ಅನುಸೂಯೆಯಲ್ಲಿ ಪರ್ಯವಸಾನವನ್ನು ಹೊಂದುತ್ತದೆ. ಅನುಸೂಯೆ ಎಂದರೆ ಸದ್ಭಾವ, ಅಸೂಯೆ ಎಂದರೆ ದುರ್ಭಾವ. ಸದ್ಭಾವವೆನಿಸಿದ ಅನುಸೂಯೆಗೆ ಅತ್ರಿಋಷಿಯು ಗಂಡನು. ಸತಿ ಅನುಸೂಯೆ ಚರಿತ್ರೆಯಲ್ಲಿ ಹೇಳಲ್ಪಡುತ್ತದೆ. ಅತ್ರಿಋಷಿ ಎಂದರೆ ಗುಣತ್ರಯ, ವಿರಹಿತವಾದ ನಡವಳಿಕೆಯನ್ನು ಹೊಂದಿದಾತ ಅಂದರೆ ಸತ್ಕ್ರಿಯಾ ಮೂರ್ತಿಯು, ಸದ್ಭಾವವೆನಿಸಿದ ಅನುಸೂಯೆ, ನಲ್ಮೆ ಎನಿಸಿದ ಅತ್ರಿಋಷಿ ಇವರ ಸಂಯೋಗದಿಂದ ಹುಟ್ಟುವ ಶಿಶುವೇ ದತ್ತಾತ್ರೇಯನು. ದತ್ತ ಆತ್ರೇಯನು ಅಂದರೆ ಅಪ್ರಯೋಗಿವರ ಋಷಿಗಳಿಂದ ಆರಾಧಿಸಲ್ಪಡುವ ವಸ್ತುವು ಸದ್ಭಾವಧ್ಯೋತಕವಾದ ಅನುಸೂಯೆ ಮತ್ತು ಇವಳ ಪತಿ ಅತ್ರಿ ಋಷಿ ಅಂದರೆ ಸತ್ವ, ರಜ, ತಮ, ಈ ಗುಣತ್ರಯ ವಿರಹಿತವಾದ ನಡತೆಯು ಸತ್ಕ್ರಿಯಾವಂತ ಇವರ ಒಡನಾಟದಿಂದ ಜನಿಸಿದ ಸತ್, ಚಿತ್, ಆನಂದಮಯನಾದ ಸಚ್ಚಿದಾನಂದಮೂರ್ತಿ, ಸುಜ್ಞಾನದ ಸಂಕೇತವೇ ದತ್ತಾತ್ರೇಯನು, ಸತ್ಕ್ರಿಯೆ-ಸದ್ಭಾವಗಳ ಸುಜ್ಞಾನದಿಂದ ಉದಿಸಿದ ಸ್ವಾನುಭಾವವಿದು. ಈ ಸ್ವಾನುಭಾವವು ಸಚ್ಚಿದಾನಂದಮಯವು ಇಂಥ ಸಚ್ಚಿದಾನಂದ ಸ್ಥಿತಿಯು ಸ್ವಾನುಭಾವಿಗಳಿಗಲ್ಲದೇ ಅನ್ಯರಿಗೆ ಅಜ್ಞೇಯವಾದುದು. ವಚನ ವಾಙ್ಮಯವು ಇಂತಹ ಆಜ್ಞೇಯವನ್ನು ಜ್ಞೇಯಗೊಳಿಸಲು ಗುರು, ಲಿಂಗ, ಜಂಗಮ ಎಂಬ ಮೂರ್ತಿತ್ರಯಗಳಿಂದ ಸಹಜವಾಗಿ ಹವಣಿಸಲು ಸಹಕಾರಿಯಾಗುವುದು.

ಶರಣರ ವಚನ ಸಾಹಿತ್ಯದಲ್ಲಿ ಉಕ್ತವಾಗುವ ಸತಿಭಾವದ ಭಕ್ತಿಯು ಅನುಸೂಯೆಯಾಗಿ ಶರಣಸತಿ, ಲಿಂಗಪತಿ ಎಂಬ ಭಕ್ತಿಭಾವವು ಲಿಂಗಾನುಸಂಧಾನದಿಂದ ಸದ್ಭಾವಗೊಂಡು ಸುಜ್ಞಾನವನ್ನು ಪಡೆದು ಸ್ವಾನುಭಾವ ಸಂಪಾದನೆಗೆ ನಿಲುಕಿಸಿದೆ. ಈ ಸ್ವಾನುಭಾವ ಸಂಪಾದನೆಯನ್ನು ಗುರು, ಲಿಂಗ, ಜಂಗಮ ತ್ರಿಮೂರ್ತಿಗಳಲ್ಲಿ ದೃಷ್ಟಿಸಿದ ಘನತೆಯು ಶರಣರ ವಚನ ಸಾಹಿತ್ಯಕ್ಕೆ ಇದೆ ವಚನಗಳಲ್ಲಿ ಸ್ವಾನುಭಾವದ ಸುಮಧುರ ಸುವಾಸನೆಯು ಹೊರಸೂಸುತ್ತ ಓದುಗರನ್ನು ಸಮ್ಮೋಹಿತಗೊಳಿಸುತ್ತದೆ.

"ಸ್ವಾನುಭಾವದುದಯದಿಂದ ಜ್ಞಾನನೇತ್ರ ಮುಸುಕು ತೆರೆದು
ತಾನು ತನ್ನ ನಿಜವ ನೋಡಿ ತಿಳಿದ ಮಹಿಮರು.

ಶರಣರ ಅನುಭಾವ ಸಾಹಿತ್ಯವು ಭಾವ ಭಾಷೆಗಳ, ಹಸನಾದ ಬೆಸುಗೆಯಿಂದ ಸತೀಸ್ಥಾಯಿ ಭಾವದ ಪದರಿನಲ್ಲಿ ರಸಸ್ವಾದನೆಗೆ ಇಂಬುಗೊಟ್ಟು ಲಿಂಗಾನಂದ ಶರಧಿಯಲ್ಲಿ ಮೈ ಮರೆಯಲು ಅನುಕೂಲಕರವಾದುದ್ದಾಗಿದೆ. ವಚನ ಸಾಹಿತ್ಯದ ನುಡಿಯ ಬೆಡಗಿನಿಂದ ಅರುವಿನ ವಿಕಾಸವಾಗುತ್ತದೆ. ಅಷ್ಟೇ ಅಲ್ಲ ಜೀವಕಳೆ ರೂಪಗೊಂಡಿದೆ ಪ್ರಾಣಶಕ್ತಿಯು ಸ್ಪಂದಿಸುತ್ತದೆ. ಆತ್ಮನ ಪರಿಪೂರ್ಣತೆಯು ಒಡಮೂಡಿದೆ ಹಾಗೂ ಛಂದೋಗತಿಯ ನಿನಾದದಲ್ಲಿ ಮೆರುಗನ್ನು ಪಡೆದು ವಿಶ್ವನಾದಕ್ಕೆ ಧ್ವನಿಗೂಡುತ್ತದೆ. ಕನ್ನಡ ಸಾಹಿತ್ಯ ಸಾಮ್ರಾಜ್ಯದಲ್ಲಿ ಶರಣರ ವಚನ ವಾಙ್ಮಯವು ನಿರ್ಮಿಸಿರುವ ನವಿನ್ಯತೆಯಿಂದಾಗಿ ಇದು ವಿಶ್ವ ಸಾಹಿತ್ಯದ ಮುಕುಟಮಣಿ ಎನಿಸಿದೆ.

******

ನೆನಪಿನ ಅಂಗಳದಲ್ಲಿ ಶರಣ ಮೇಳ

– ಪೂಜ್ಯ ಶ್ರೀ ಬಸವಪ್ರಭು ಸ್ವಾಮೀಜಿ

ಏ ಮಗಾ! ಬಾರೋ ಇಲ್ಲಿ. ನೀನು ಈಗ ಶಾಲೆಗೆ ಹೋಗಿ ಮೂರು ದಿವಸ ಬಿಟ್ಟು ಅಮವಾಸ್ಯೆ ಶರಣ ಸಂಗಮ ಕಾರ್ಯಕ್ರಮಕ್ಕೆ ಬರಬೇಕು. ಸಂಕ್ರಮಣಕ್ಕೆ ಶಾಲೆಗೆ ರಜೆ ಕೊಟ್ಟಿರುತ್ತಾರೆ. ಅದರ ಹಿಂದಿನ ದಿನ ಶನಿವಾರ, ರವಿವಾರ ರಜಾ ದಿನಗಳು ಬಂದಿವೆ. ಇನ್ನೊಂದು ದಿವಸ ರಜೆ ಹಾಕಿ ಬರಬೇಕು ನೋಡು. ಏಕೆಂದರೆ ಕೂಡಲಸಂಗಮಕ್ಕೆ ಹೋಗುವುದಿದೆ. ನಮ್ಮ ಅವ್ವನಿಗೆ ಹೇಳು; ಒಂದಷ್ಟು ರೊಟ್ಟಿ, ಉಣಸೆ ಚಟ್ನೆ, ಚುರುಮುರಿ, ಚಕ್ಕಲಿ, ಕೋಡಬೇಳೆ, ಕರ್ಜಿಕಾಯಿ ಈ ಎಲ್ಲಾ ಅಡಿಗೆಯನ್ನು ಮಾಡಿಕೊಂಡು ಬುತ್ತಿ ಕಟ್ಟಿಕೊಂಡು ಬಾ ಅಂತ. ಕೂಡಲ ಸಂಗಮಕ್ಕೆ ಬಹಳಷ್ಟು ರೊಟ್ಟಿ ತಕ್ಕೊಂಡು ಹೋಗಿ ದಾಸೋಹಕ್ಕೆ ಮುಟ್ಟಿಸುವುದಿದೆ. ನಿಮ್ಮ ಮನೆಯಿಂದ್ಲೂ ರೊಟ್ಟಿ ಬರ್ಬೇಕಿಲ್ಲೊ? ಊಂ... ಮತ್ತೆ; ನಾ ಹೇಳಿದ್ದೆಲ್ಲಾ ನೆನಪಿರಲಿ ಮಗಾ... ನಿಮ್ಮ ಅವ್ವನಿಗೆ, ಆಶ್ರಮದ ಅಜ್ಜನವರು ಹೇಳಿ ಕಳುಹಿಸಿದ್ದಾರೆಂದು ಹೇಳು ಮರಿಬೇಡ.

ಹೀಗೆ ಸಡಗರ, ಸಂಭ್ರಮ, ಆನಂದದಿಂದ ದರ್ಶನಕ್ಕೆ ಬಂದ ಶಿಷ್ಯರಿಗೆಲ್ಲಾ ಕೂಡಲ ಸಂಗಮದ ಶರಣ ಮೇಳದಲ್ಲಿ ನಡೆಯುವ ಶರಣ ಮೇಳಕ್ಕೆ ತನು, ಮನ, ಧನ ದಾಸೋಹಕ್ಕಾಗಿ ಸಕಲ ಸಿದ್ಧತೆಯನ್ನು ಮಾಡಿಕೊಂಡು ಬರಲು ಪ್ರೋತ್ಸಾಹ ನೀಡುತ್ತಿದ್ದ, ಕಂಪ್ಲಿಯ(ಹೊಸಪೇಟ ತಾಲೂಕ) ಭಕ್ತಿ ಭಂಡಾರಿ ಆಶ್ರಮದ ಹಿರಿಯ ಚೇತನ,. ಸದ್ಗುರು, ಅಪ್ಪಾಜಿಯವರಿಂದ ಲಿಂಗಧೀಕ್ಷೆ, ಮಾತಾಜಿಯವರಿಂದ ಜ್ಞಾನದೀಕ್ಷೆ ತೆಗೆದುಕೊಂಡು ಸಂಸಾರಿಯಾಗಿದ್ದರೂ ಮನೆಯನ್ನು(ಗ್ರಹಸ್ಥಾಶ್ರಮವನ್ನು ಬಿಟ್ಟು) ಊರ ಹೊರಗಿನ ಪುರಸಭೆಯ ಜಾಗದಲ್ಲಿ ಒಂದು ಗುಡಿಸಲಿನ ಕುಟೀರ ಮಾಡಿಕೊಂಡು ಬಸವಧರ್ಮ ಪ್ರಸಾರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು 'ಎಲೆ ಮರೆಯ ಕಾಯಿಯಂತೆ', ಧರ್ಮಕ್ಕಾಗಿ ಸೇವೆ ಸಲ್ಲಿಸಲು ಕಂಕಣ ಬದ್ಧರಾಗಿದ್ದ 70 ವರ್ಷದ ಕಾವಿಧಾರಿ, ಶಿವಯೋಗಿ ಪೂಜ್ಯ ಭೀಮಯ್ಯ ಅಜ್ಜನವರು.

1975ರ ದಶಕದಲ್ಲಿ ಲಿಂಗದೀಕ್ಷೆ ತೆಗೆದುಕೊಂಡು ಅಂದಿನಿಂದ ದುಶ್ಚಟಗಳನ್ನು ಬಿಟ್ಟಿದ್ದ. ಅಪ್ಪಾಜಿ, ಮಾತಾಜಿಯವರ ವಿದ್ವತ್ತಿನ ಜ್ಞಾನ ಪ್ರವಚನದಿಂದ ಪರಿವರ್ತನೆಯಾಗಿ ತನ್ನ ಸುತ್ತ-ಮುತ್ತಲಿನ ಮನೆ, ಊರುಗಳಲ್ಲಿ ಸಂಚರಿಸುತ್ತಾ ಬಸವಧರ್ಮ ಪ್ರಸಾರ ಮಾಡುತ್ತಿದ್ದರು ಶಿಕ್ಷಣವೇನು ಕಲಿಯದಿದ್ದ ಪೂಜ್ಯರು ಶ್ರೇಷ್ಠ ಅನುಭಾವಿಯಾಗಿದ್ದರು. ನನ್ನ ಪೂರ್ವಾಶ್ರಮದ ತಂದೆಯನ್ನ ಮತ್ತು ನಮ್ಮ ಊರಿನ ಕೆಲವಾರು ಜನರನ್ನು ಪರಿವರ್ತಿಸಿದ್ದ ಆದರ್ಶ ಚೇತನ ಅವರಾಗಿದ್ದರು.

ಪೂರ್ವಾಶ್ರಮದ ನನ್ನ ತಂದೆಯವರು, ಒಕ್ಕಲುತನವನ್ನು ಮಾಡುತ್ತಾ ಆದರ್ಶ ರೈತರಾಗಿ ಜೀವನ ಸಾಗಿಸುತ್ತಿದ್ದರು. ಸಾಧು ಸಂತರನ್ನು, ಶರಣರನ್ನು ಕಂಡರೆ; ಮನೆಗೆ ಕರೆದುಕೊಂಡು ಬಂದು ಅವರಿಗೆ ಪ್ರಸಾದ ಮಾಡಿಸಿ ಕಳುಹಿಸದ ಹೊರತು ಬಿಡುತ್ತಿರಲಿಲ್ಲ. ಆ ರೀತಿಯಾಗಿ ನಮ್ಮ ಅಜ್ಜಿ ಸಂಸ್ಕಾರ ಕೊಟ್ಟಿದ್ದಳು. ಆದರೆ ಬಂದವರೆಲ್ಲ ಕೆಲ ಸಾಧುಗಳು ಒಳ್ಳೆಯವರಿರುತ್ತಿರಲಿಲ್ಲ. ಗಾಂಜಾ, ಆಫೀಮು ಮುಂತಾಗಿ ಮತ್ತೇರಿಸುವ ದೂಮಪಾನವನ್ನು ಮತ್ತು ಮದ್ಯಪಾನವನ್ನು ಮಾಡುತ್ತಿದ್ದವರೂ ಇದ್ದರು. ಇವರುಗಳು ನಮ್ಮ ತಂದೆಯ

ಪರೋಪಕಾರ ಸೇವೆಯನ್ನು ಕಂಡು ಪುನಃ ಪುನಃ ಮನೆಗೆ ಬರುವುದು ರೂಡಿಯಾಗಿ ಮಾಡಿಕೊಂಡಿದ್ದರು.

ಅತ್ಯಂತ ಬಡತನದಲ್ಲಿದ್ದ ತಂದೆಯವರು, ಕುಟುಂಬಕ್ಕೆ ಒಂದು ಹೊತ್ತಿನ ಊಟವನ್ನು ಒದಗಿಸುವುದು ಆಗಿನ ಕಾಲದಲ್ಲಿ ತುಂಬಾ ಕಷ್ಟವಾಗುತ್ತಿತ್ತು. ಅಂಥದ್ದರಲ್ಲಿ ಈ ಸಾಧು ಜನಗಳ ಉಪಟಳದಿಂದ ಸಾಲ ಮಾಡುತ್ತಾ, ತಮ್ಮ ಹೆಸರಿಗಿರುವ ತುಂಡು ಭೂಮಿಯನ್ನು ಕಡಿಮೆ ಬೆಲೆಗೆ ಅಡವಿಟ್ಟರು. ಸಾಲ ತೀರಿಸಲಾರದೆ, ಚಿಂತೆಗೊಳಗಾಗಿ ಮನೆ ಬಿಟ್ಟು ಈ ಸಾಧುಗಳ ಜೊತೆ ಸೇರಿಕೊಂಡು ಎಲ್ಲಾ ದುಶ್ಚಟಗಳಿಗೆ ದಾಸರಾಗಿ ಊರಿಂದೂರಿಗೆ ತಿರುಗಲು ಪ್ರಾರಂಭಿಸಿದರು. ನನ್ನ ತಾಯಿಯವರು ಇವರ ವರ್ತನೆಯನ್ನು ಕಂಡು ಚಿಂತಾಕ್ರಾಂತರಾದರೂ ಎದೆಗುಂದದೆ ನಮ್ಮೆಲ್ಲರನ್ನು (ಆರುಜನ ಮಕ್ಕಳನ್ನು) ಕೂಲಿ ನಾಲಿ ಮಾಡಿ ಸಾಕುತ್ತಿದ್ದಳು. ನಾನು ಆಗ 5 ವರ್ಷದ ಬಾಲಕನದ್ದೆ ನನ್ನನ್ನು ಕರೆದುಕೊಂಡು ಕೆಲಸಕ್ಕೆ ರಜೆವಿದ್ದಾಗಲ್ಲೆಲ್ಲಾ ತಂದೆಯನ್ನು ಹುಡುಕಲು ಊರೂರು ಅಲೆದಿದ್ದು ಆಯಿತು. ಯಾರೋ ಪರಿಚಿತರೊಬ್ಬರು ಹೇಳಿದ ಕಂಪ್ಲಿಯ ಭಕ್ತಿಭಂಡಾರಿ ಬಸವೇಶ್ವರ ಆಶ್ರಮದಲ್ಲಿ ತಂದೆಯವರು ಇದ್ದುದ್ದನ್ನು ಕಂಡು ನಾನು ಮತ್ತು ನನ್ನ ತಾಯಿಯವರು ಭೇಟಿ ಮಾಡಲು ಹೋದೆವು....ಇನ್ನೇನು ಆ ದುಶ್ಚಟ ಸಾಧುಗಳ ಸಂಘದಲ್ಲಿ ಸೇರಿ ತಂದೆಯವರು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದ ಆ ದಿನಗಳಲ್ಲಿ ಅವರನ್ನು ಎಚ್ಚರಿಸಿ ಬಸವ ಧರ್ಮ ಮಾರ್ಗಕ್ಕೆ ತಂದ ಪೂಜ್ಯ ಭೀಮಯ್ಯ ಅಜ್ಜನವರು ಅಂದು ನಮ್ಮೆಲ್ಲರನ್ನು ಉದ್ದೇಶಿಸಿ ಗುರು ಬಸವಣ್ಣನವರ ವಚನ ಪ್ರಸ್ತಾಪಿಸುತ್ತ..

ಗುರು ಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನೆ:
ಹಿಂದ ಬಿಟ್ಟು ಮುಂದೆ ಹಿಡಿಯಲೇ ಬೇಕು.
ಲಿಂಗದೇವ ಕೇಳಯ್ಯಾ,
ಕಿಚ್ಚಿನೊಳಗೆ ಕೋಲ ಬೈಚಿಟ್ಟಂತಿರಬೇಕು!

ಆಧ್ಯಾತ್ಮಿಕ ಜೀವನದಲ್ಲಿ ದೀಕ್ಷಾನುಗ್ರಹ ಬಹಳ ಮಹತ್ವಪೂರ್ಣ ಘಟನೆ; ವ್ಯಕ್ತಿಗಳ ಜೀವನದ ದಿಕ್ಕನ್ನೆ ಬದಲಿಸುವಂತಹದ್ದು. ದೀಕ್ಷಾ ನಂತರ ಶಿಷ್ಯರಲ್ಲಿ ಅಪಾರ ಬದಲಾವಣೆಯಾಗಬೇಕು. ಹಿಂದಿನ ಆಚರಣೆಗಳನ್ನು ಬಿಟ್ಟು ತತ್ವ ನಿಷ್ಠನಾಗಬೇಕು. ದುರಾಚಾರವಿದ್ದರೆ ಅದನ್ನು ಬಿಟ್ಟು ಸದಾಚಾರಿಯಾಗಬೇಕು. ಉರಿಯುವ ಕಿಚ್ಚಿನಲ್ಲಿ ಒಂದು ಕೋಲನ್ನು ಬಚ್ಚಿಟ್ಟರೆ ಅದು ಹೇಗೆ ಬೆಂಕಿಯ ಸ್ವರೂಪವೇ ಆಗುವುದೋ ಹಾಗೆ ಇಷ್ಟಲಿಂಗ ದೀಕ್ಷಾ ನಂತರದಲ್ಲಿ ಜ್ಞಾನಾತ್ಮಕ ಮಾರ್ಗವನ್ನು ಹಿಡಿಯಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ದೀಕ್ಷೆ ತೆಗೆದುಕೊಂಡು ನಿಷ್ಠೆಯಿಂದ, ನೀತಿಯಿಂದ ಬಾಳಬೇಕಲ್ಲದೆ, ಈ ಕ್ಷಣಿಕ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು. ಎಂದು ಹೇಳಿ ಪ್ರವಚನ ಮುಗಿಸಿದರಂತೆ. ಈ ಪ್ರವಚನ ಕೇಳಿದ ನಮ್ಮ ತಂದೆಯವರು ತಾವೂ ಲಿಂಗದೀಕ್ಷೆ ಈ ಬಾರಿ ಶರಣ ಮೇಳದಲ್ಲಿ ತೆಗೆದುಕೊಳ್ಳಬೇಕೆಂದು ಸಂಕಲ್ಪಿಸಿದರಂತೆ.

ಈ ರೀತಿಯಾಗಿ ತನ್ನ ಜೀವನವನ್ನು ಪೂಜ್ಯರಿಂದ ಪರಿವರ್ತಿಸಿಕೊಂಡ ನಮ್ಮ ಪೂರ್ವಾಶ್ರಮದ ತಂದೆಯವರು ಮತ್ತೆಂದು ಮದ್ಯಪಾನ ಮಾಡಲು ಪ್ರೇರಿತರಾಗಲಿಲ್ಲವಂತೆ.

ಈ ಘಟನೆಯನ್ನು ನನ್ನ ತಾಯಿಗೆ ನನಗೂ ಹೇಳಿದ ಅಜ್ಜನವರು ರುದ್ರಾಕ್ಷಿ ಧರಿಸಿ ನಮ್ಮೊಟ್ಟಿಗೆ ನಮ್ಮ ತಂದೆಯವರನ್ನು ಪೂಜ್ಯರು ಕಳುಹಿಸಿಕೊಡಲು ನಿರ್ಧರಿಸಿ ಇಬ್ಬರಿಗೂ ಪುಷ್ಪವೃಷ್ಟಿ ಮಾಡಿ ಹಾರೈಸಿ ಬೀಳ್ಕೊಟ್ಟರು. ಅಂದಿನಿಂದ ಊರಿಗೆ ಬಂದ ನಮ್ಮ ತಂದೆಯವರು ತಾನಾಯಿತು, ತನ್ನ ದುಡಿಮೆಯಾಯಿತು ಎನ್ನುವಂತೆ ಶ್ರದ್ಧೆಯಿಂದ ದುಡಿಯುತ್ತಾ, ಕೆಲವೇ ವರ್ಷದಲ್ಲಿ ಅಡವಿಟ್ಟ ಹೊಲವನ್ನು ಬಿಡಿಸಿಕೊಂಡು ಉಳಿಮೆ ಮಾಡುತ್ತಾ ನನಗೆ ಮತ್ತು ನನ್ನ ಇನ್ನೊಬ್ಬ ಅಣ್ಣನಿಗೆ ಶಾಲೆಗೆ ಕಳುಹಿಸ ತೊಡಗಿದರು, ಕುಟುಂಬವನ್ನು ಸಂತೋಷದಿಂದ ಮುನ್ನೆಡೆಸಿಕೊಂಡು ಹೋಗುತ್ತಿದ್ದ ಅವರು, ಪ್ರತೀ ತಿಂಗಳ ಅಮವಾಸ್ಯೆ ಶರಣ ಸಂಗಮ ಕಾರ್ಯಕ್ರಮಕ್ಕೆ ದಂಪತಿಗಳಿಬ್ಬರೂ ಆಶ್ರಮಕ್ಕೆ ಹೋಗಿ ಬರುತ್ತಿದ್ದರು. ನಮ್ಮ ತಂದೆಯಿಂದ ಊರಿನ ಕೆಲ ಜನರು ಕುಡಿಯುವುದನ್ನು ಬಿಟ್ಟು, ನಮ್ಮೊಟ್ಟಿಗೆ ಅಶ್ರಮಕ್ಕೆ ಬರಲು ತೊಡಗಿದರು.

ಡಿಸೆಂಬರ ತಿಂಗಳು ಸುಮಾರು 50 ಜನ ಸೇರಿಕೊಂಡು ಶರಣ ಸಂಗಮ ಕಾರ್ಯಕ್ರಮಕ್ಕೆ ಹೋಗಲು ಸಿದ್ಧರಾಗಿದ್ದರು. ನಾನು ಅವರೊಟ್ಟಿಗೆ ಹೋಗಲು ಅನುವಾದೆ. (ಆಗ ನಾನು 4ನೇ ತರಗತಿಯಲ್ಲಿ ಓದುತ್ತಿದ್ದೆ.) ಕಾರ್ಯಕ್ರಮ ಅಚ್ಚುಕಟ್ಟಾಗಿ ನೆರವೇರಿತು. ಕಾರ್ಯಕ್ರಮ ಮುಗಿದ ನಂತರ ಎಲ್ಲರಿಗೂ ಶರಣ ಮೇಳಕ್ಕೆ ಬರಲು ಪೂಜ್ಯರು ಆಹ್ವಾನವಿತ್ತು, ಅವರವರಿಗೆ ಜವಬ್ದಾರಿ ವಹಿಸಿಕೊಡುತ್ತಿದ್ದರು. ನನ್ನನ್ನು ಕರೆದು ಮಾತಾನಾಡಿಸಿ ನಿಮ್ಮ ಅಪ್ಪನಿಗೆ ಶರಣ ಮೇಳಕ್ಕೆ ಜಾಸ್ತಿ ರೊಟ್ಟಿ ಮಾಡಿಕೊಂಡು ಬರಲು ಹೇಳಬೇಕು ಮತ್ತು ಶರಣ ಮೇಳದ ಕರಪತ್ರ ನನ್ನ ಕೈಗೆ ಇತ್ತು ನಿಮ್ಮ ಊರಾಗ ಮನೆಮನೆಗೆ ಹಂಚಬೇಕೇಂದು ಹೇಳಿ ಕಳುಹಿಸಿದ್ದರು. ಅದರಂತೆ ನಾನು ಕರ ಪತ್ರವನ್ನು ಹಂಚಿ ಪೂಜ್ಯರು ಹೇಳಿದ ಎಲ್ಲಾ ವಿಷಯ ನನ್ನ ತಾಯಿಗೆ ತಿಳಿಸಿದೆ.

ಪೂಜ್ಯರು ಮತ್ತು ಅವರ ಶಿಷ್ಯರನ್ನೆಲ್ಲ ಪ್ರತೀ ವರ್ಷ ಕರೆದುಕೊಂಡು ಹೋಗುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಅದೇ ರೀತಿ ಕೆಲವು ಜನರಿಗೆ ದೀಕ್ಷೆಯನ್ನು ಶರಣ ಮೇಳದಲ್ಲಿ ಕೊಡಿಸುತ್ತಿದ್ದರು. ಈ ಸಲದ ಸರದಿ ನನ್ನ ತಂದೆ ತಾಯಿಗಳದ್ದು. ಮುಂಚಿತವಾಗಿಯೇ ಎಲ್ಲಾ ಸಿದ್ಧತೆಯನ್ನು ಮಾಡಿಕೊಂಡಿದ್ದ ನನ್ನ ತಂದೆ ತಾಯಿಗಳು ನನ್ನ ಹಿರಿಯ ಅಣ್ಣನನ್ನು ಮನೆಯಲ್ಲಿಯೇ ಬಿಟ್ಟು ಉಳಿದವರನ್ನೆಲ್ಲಾ ಶರಣ ಮೇಳಕ್ಕೆ ತಯಾರು ಮಾಡಿದ್ದರು. ಅಂದು ದಿನಾಂಕ **10/01/1992** ಶರಣ ಮೇಳವೆಂಬ ಆಗಸಕ್ಕೆ ಹಾರಲು, ನಮ್ಮೆಲ್ಲರ ಸಂತಸದ ರೆಕ್ಕೆ-ಪುಕ್ಕಗಳು ಗರಿಗೆದರಿ ಆನಂದ ತುಂದಿಲರಾದೆವು. ಅಂದು ಸಂಜೆ 6ಗಂಟೆಗೆ 150ಜನ ಎರಡು ಬಸ್ಸಿನಲ್ಲಿ ಪೂಜ್ಯರೊಟ್ಟಿಗೆ ಕೂಡಲ ಸಂಗಮದತ್ತ ಪ್ರಯಾಣ ಬೆಳೆಸಿದೆವು. ಬಸ್ಸಿನಲ್ಲಿ ಆಗಾಗ ಪೂಜ್ಯರು ಹಾಡುತ್ತಿದ್ದ ನಿಜಗುಣ ಶಿವಯೋಗಿಗಳ ಮತ್ತು ಮುಪ್ಪಿನ ಷಡಕ್ಷರಿಯವರ ಆಧ್ಯಾತ್ಮಿಕ ಕೈವಲ್ಯ ಗೀತೆಗಳು ನಮ್ಮ ಮನಸ್ಸನ್ನು ಸೂರೆ ಮಾಡುತ್ತಿದ್ದವು. ನನ್ನ ತಂದೆಯವರು ಹಾಡಿದ ಒಂದು ಹಾಡು ಇನ್ನೂ ನನ್ನ ಚಿತ್ತ ಪಟಲದ ಮೇಲೆ ಉಳಿದಿದೆ. "ಹೋಗೋಣ ನಡಿ ತಂಗಿ ಶರಣ ಮೇಳಕ್ಕ, ನಮ್ಮ ಜೀವನ ಸಾರ್ಥಕ ಗೊಳಿಸೋದಕ್ಕ"(ಭಜನೆ ಹಾಡನ್ನು ಬಹಳ ಸುಶ್ರಾವ್ಯ ಕಂಠದಿಂದ ಆಗಾಗ ಹಾಡುತ್ತಿದ್ದರು) ಹೀಗೆ ವಚನಗಳ ಜಯಘೋಷಗಳೊಂದಿಗೆ ನಮ್ಮ ಪ್ರಯಾಣ ಕೂಡಲ ಸಂಗಮಕ್ಕೆ ತಲುಪಿತು. ಪೂಜ್ಯರು ನಮ್ಮೆಲ್ಲರಿಗೆ ಉಳಿದುಕೊಳ್ಳಲು ಮುಂಚಿತವಾಗಿಯೇ ಶರಣ ಮೇಳದ 5 ಟೆಂಟ್‌ಗಳ ವ್ಯವಸ್ಥೆ ಮಾಡಿದ್ದರು. ಪ್ರತಿ ನಿತ್ಯ ನದಿಯಲ್ಲಿ ಸ್ನಾನ ಮಾಡುವುದು, ಶರಣ ಮೇಳದ ವೇದಿಕೆಯ ಮೇಲೆ ನಡೆಯುವ ಪ್ರಾರ್ಥನೆ, ಪ್ರವಚನ,

ಮಾತಾಜಿಯವರ ವಾಣಿಯನ್ನು ಕೇಳುವುದೆಂದರೆ, ನಮ್ಮೆಲ್ಲರ ಮೈ ಮನಂಗಳು ಪುಳಕಗೊಳ್ಳುತ್ತಿದ್ದವು.

ಎರಡನೇ ದಿನ ಪರಮ ಪೂಜ್ಯ ಜಗದ್ಗುರು ಗಂಗಾ ಮಾತಾಜಿಯವರಿಂದ ನಮ್ಮ ತಂದೆ ತಾಯಿಯವರಿಗೆ ಪೂಜ್ಯರು ಲಿಂಗ ದೀಕ್ಷೆ ಕೊಡಿಸಿದರು. ಮಾತಾಜಿಯವರು ಕೆಲವು ಪ್ರತಿಜ್ಞೆಗಳನ್ನು ಮಾಡಿಸಿ, ಅಲ್ಲಿದ್ದ ನಮ್ಮೆಲ್ಲರಿಗೆ ಆಶೀರ್ವದಿಸಿ ಮಂಗಲ ಮಾಡಿದರು. ನನ್ನ ತಂದೆಯವರಂತೂ ಕಬ್ಬಿಣ ಮುಟ್ಟಿದ ಚಿನ್ನದಂತೆ, ಮಾತಾಜಿಯವರ ಪರುಷ ಹಸ್ತದ ಅಶಿರ್ವಾದದಿಂದ ಅಪ್ಪಟ ಚಿನ್ನವಾಗಿ ಬದಲಾಗಿದ್ದರು. ಅವರಲ್ಲಿ ಬಸವ ಭಕ್ತಿಯ ಉತ್ಸಹ ಮೈ ತುಂಬಿಕೊಂಡಿತ್ತು.

ನಾಲ್ಕನೇ ದಿನ ಸುಪ್ರಭಾತ ಸಮಯ 5ಗಂಟೆಗೆ ಎಲ್ಲರೂ ಎದ್ದು ನದಿ ಸ್ನಾನಕ್ಕೆ ಹೋಗಿದ್ದೇವು. ನಾವೆಲ್ಲಾ ಸ್ನಾನ ಮಾಡುವಾಗ ನನ್ನ ಕಿರಿಯ ಅಕ್ಕನ ಕಿವಿಯ ಓಲೆ, ಕಾಲ್ಚೈನ್, ಮತ್ತು ನಮ್ಮ ತಂದೆಯ ಎರಡು ಸಾವಿರ ದುಡ್ಡು ಹಾಗೂ ಉಂಗುರ ಯಾರೋ ಕಳ್ಳರು ಕದ್ದಿದ್ದರು. ಅಲ್ಲಿದ್ದವರೆಲ್ಲಾ ಗಾಬರಿಯಾಗಿದ್ದರು. ಆದರೆ ತಂದೆಯವರು ಗಾಬರಿಯಾಗದೆ, ಅವರು ಹೇಳಿದ ಮಾತು ನಿಜವಾಗಿಯೂ ಆಶ್ಚರ್ಯ ತಂದಿತ್ತು. ಹೋಗಲಿ ಬಿಡಿ ನೀವೆಲ್ಲಾ ಬೇಗ ಸ್ನಾನ ಮಾಡಿಕೊಂಡು ಬನ್ನಿರಿ ನಿನ್ನೆ ತಾನೆ ದೀಕ್ಷೆ ತೆಗೆದುಕೊಂಡಿದ್ದೇವೆ, ಇಂದಿಗೆ ಎಲ್ಲಾ ಕರ್ಮಗಳು ಬಯಲಾದವು ಎಂದು ಭಾವಿಸೋಣ. ಕಳ್ಳರಾದರೂ ತಮ್ಮ ಹೊಟ್ಟೆ ಪಾಡಿಗಾಗಿ ಕದ್ದಿರಬಹುದು. ಅವರಲ್ಲಿ ದೇವನಿದ್ದಾನೆ ಬಿಡಿರಿ ಅವನಿಗೆ ಮುಟ್ಟಿತು ಎಂದುಕೊಳ್ಳೋಣ ಗುರು ಬಸವಣ್ಣನವರು ಮಾಡಿಸಿದಂತೆ ಆಗಲಿ, ಈಗ ಸಮುದಾಯ ಪ್ರಾರ್ಥನೆಗೆ ಸಮಯವಾಗುತ್ತಿದೆ ಬೇಗ ಹೋಗೋಣ ನಡೆಯಿರಿ ಎಂದು ಎಲ್ಲರನ್ನು ಕರೆದುಕೊಂಡು ಬಂದರು. ಕಳೆದುಕೊಂಡ ದುಡ್ಡಿನ ಬಗ್ಗೆ ಎಳ್ಳಷ್ಟು ಅವರು ತಲೆಕೆಡಿಸಿ ಕೊಳ್ಳಲಿಲ್ಲ(ಪೂಜ್ಯರಿಗೆ ಈ ವಿಷಯವನ್ನು ಕಾರ್ಯಕ್ರಮ ಮುಗಿದ ಮೇಲೆ ತಿಳಿಸಿದರು)

ಶರಣ ಮೇಳದ ಎಲ್ಲಾ ಗೋಷ್ಠಿಗಳಲ್ಲಿ ಸಂತೋಷದಿಂದ ಭಾಗಿಯಾಗಿ, ನಿರ್ಲಿಪ್ತತೆಯಿಂದ ತಲ್ಲೀನರಾಗಿ ಬಿಡುತ್ತಿದ್ದ ತಂದೆಯವರು, ಕಾರ್ಯಕ್ರಮದ ನಾಲ್ಕನೇ ದಿನ ನನಗೂ ಮತ್ತು ನನ್ನ ಅಣ್ಣನಿಗೂ ಕಲಿಸಿಕೊಟ್ಟಿದ್ದ "ಉಳ್ಳವರೂ ಶಿವಾಲಯ ಮಾಡುವರು ನಾನೇನು ಮಾಡಲಿ ಬಡವನಯ್ಯಾ...." ಎಂಬ ವಚನವನ್ನು ವೇದಿಕೆ ಮೇಲೆ ಹಾಡಿಸಬೇಕೆಂದು ರಾತ್ರಿ ಹನ್ನೆರಡು ಗಂಟೆಯವರೆಗೆ ಹಾಗೆಯೆ ವೇದಿಕೆ ಪಕ್ಕದಲ್ಲಿ ನಿಲ್ಲಿಸಿಕೊಂಡಿದ್ದರು. ಕೊನೆಗೆ ನಿರೂಪಣಾಕಾರರಿಂದ ಅವಕಾಶ ಸಿಕ್ಕಾಗ ಹಾಡಿಸಿದ್ದರು. ಯಾರಾದರೂ ಭಾಷಣ ಮಾಡುತ್ತಿದ್ದರೆ, ನನ್ನಿಬ್ಬರ ಮಕ್ಕಳು ಈ ರೀತಿ ಮಾತನಾಡಬೇಕೆಂದು ಮನದಲ್ಲಿ ಅಂದುಕೊಂಡು ನಮಗೆಲ್ಲಾ ಪ್ರೇರಣೆ ನೀಡುತ್ತಿದ್ದರು.

ಹಾಗೇಯೆ ಐದು ದಿವಸದ ಕಾರ್ಯಕ್ರಮವನ್ನು ಮುಗಿಸಿಕೊಂಡು ಎಲ್ಲರಿಗೂ ವಿಭೂತಿ, ಪುಸ್ತಕ, ರುದ್ರಾಕ್ಷಿ, ಲಾಡೂ, ಮಂಡಕ್ಕಿ ಇನ್ನಿತರ ಸಾಮಾನುಗಳನ್ನು ಖರೀದಿಸಲು ಸೂಚನೆ ಕೊಟ್ಟರು. ನನ್ನ ತಂದೆಯವರಲ್ಲಿ ಬಿಡಿ ಕಾಸು ಇಲ್ಲದಿದ್ದರಿಂದ ಪೂಜ್ಯರಲ್ಲಿ ಒಂದು ಸಾವಿರ ತೆಗೆದುಕೊಂಡು ವಚನ ಪುಸ್ತಕ, ವಿಭೂತಿ, ರುದ್ರಾಕ್ಷಿ, ಸಿಹಿ ತಿನಿಸುಗಳನ್ನು ಖರೀದಿಸಿದ್ದರು. ಮನೆಗೆ ಬಂದಾಗ ಇನ್ನಷ್ಟು ಮಂಡಕ್ಕಿ, ಪುಟಾಣಿ ಅಂಗಡಿಯಿಂದ ತರಿಸಿ ಬಸವೇಶ್ವರ ಪೂಜಾವ್ರತ ಮಾಡಿ, ಊರಿನ ಮನೆ ಮನೆಗೆಲ್ಲಾ

ಪ್ರಸಾದ ಮತ್ತು ವಿಭೂತಿಯನ್ನು ಹಂಚಿದ್ದರು. ಹೀಗೆ ಪ್ರತೀ ವರ್ಷ ತಪ್ಪದೆ, ಶರಣ ಮೇಳಕ್ಕೆ ತಮ್ಮ ಕೊನೆಯ ಜೀವಿತಾವದಿಧಿಯವರೆಗೂ ಬರುತ್ತಿದ್ದರು. ನಾನು ಜಂಗಮ ದೀಕ್ಷೆ ತೆಗೆದುಕೊಳ್ಳುವಾಗ ತಾನು ಸ್ವಯಂಕೃತವಾಗಿ ಕಾವಿ ಧರಿಸಿ, ಆದರ್ಶ ಜೀವನ ನಡೆಸಿದ ಪೂಜ್ಯನೀಯ ತಂದೆಯವರು 4 ವರ್ಷದ ಹಿಂದೆ ಲಿಂಗೈಕ್ಯರಾದರು. ಅವರ ಆಧ್ಯಾತ್ಮದ ಬಳ್ಳಿಯಾಗಿ ನಾನು ಬಸವಧರ್ಮ ಪೀಠದಲ್ಲಿ ಸೇವೆ ಮಾಡಲು ಅವಕಾಶ ಸಿಕ್ಕಿದ್ದು ನನ್ನ ತಂದೆಯ ಸಂಕಲ್ಪ ಮತ್ತು ನನ್ನ ಜನ್ಮಜನ್ಮಾಂತರದ ಪುಣ್ಯವೆಂದು ಹೇಳಲು ಹೆಮ್ಮೆ ಎನಿಸುತ್ತಿದೆ.

ಶರಣ ಮೇಳವು ದಾರಿ ತಪ್ಪಿದವರಿಗೆ ದಾರಿ ದೀಪವಾಗಿ, ಬಡವರಿಗೆ ಬದುಕನ್ನು ಕಟ್ಟಿಕೊಟ್ಟು, ಶ್ರೀಮಂತರಿಗೆ ಅಹಂಕಾರವನ್ನು ನಿರಶನ ಮಾಡಿ, ಮುಮುಕ್ಷುಗಳಿಗೆ ಮುಕ್ತರನ್ನಾಗಿಸಿ, ಸಾಮಾನ್ಯರನ್ನು ಅಸಮಾನ್ಯರನ್ನಾಗಿಸಿ, ಸಮಾನತೆ ಮತ್ತು ಸಹೋದರತೆ ಭಾವವನ್ನು ಬಿಂಬಿಸಿ, ಧಾರ್ಮಿಕ ಕ್ಷೇತ್ರದಲ್ಲಿ ಸಂಸ್ಕಾರ, ಸಂಘಟನೆ, ಶಿಸ್ತನ್ನು ರೂಢಿಸಿಕೊಟ್ಟು ಸರ್ವರಿಗೂ ಮಾದರಿಯಾಗಿ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಭೂ ಲೋಕದ ಹಬ್ಬ ಶರಣ ಮೇಳವೆಂದರೆ ಉತ್ಪ್ರೇಕ್ಷೆಯಾಗದು.

ಅಪ್ಪಾಜಿ ಮಾತಾಜಿಯವರ ಜ್ಞಾನದ ಚಿದ್ಗರ್ಭದಲ್ಲಿ ಹುಟ್ಟಿದ ಶರಣ ಮೇಳವು ಅನೇಕ ಸಾಧನೆಯ ಮಹಾಪೂರವನ್ನೇ ಹರಿಸಿದೆ. 29 ವರ್ಷದಲ್ಲಿ ಲಿಂಗಾಯತ ಧರ್ಮಕ್ಕೆ ಚೌಕಟ್ಟನ್ನು ನೀಡಿ, ವಚನ ಸಾಹಿತ್ಯವನ್ನು ದೇಶ ವಿದೇಶದಲ್ಲಿ ಮುಟ್ಟಿಸಿ, ಜಾಗತಿಕ ಇತಿಹಾಸಕ್ಕೆ ಗುರು ಬಸವಣ್ಣನವರನ್ನು ವಿಶ್ವಗುರು ಎಂದು ಸಾರಿ, ಅನೇಕ ಜಗದ್ಗುರು ಜಂಗಮ ಮೂರ್ತಿಗಳನ್ನು, ಬಸವ ಧರ್ಮ ಪ್ರಸಾರಕರನ್ನು, ಕ್ರಿಯಾ ಮೂರ್ತಿಗಳನ್ನು ತಯಾರು ಮಾಡಿ, ಜಡ ಸಂಸ್ಕೃತಿಯಲ್ಲಿ ಬಸವಳಿದ ಮಠಾಧೀಶರನ್ನು ಬಸವಾರಾಧಕರನ್ನಾಗಿ ಪರಿವರ್ತಿಸಿದ ಕೀರ್ತಿ ಶರಣ ಮೇಳದ್ದು.

"ಬಸವ ಪೀಠವು ಎದ್ದು, ಒಸೆದು ನಾಣ್ಯವು ಹುಟ್ಟಿ ಬಸವನ ಮುದ್ರೆ ಮೆರೆದಾವು ಧರೆಯವಗೆ ವಶವಾಗದಿಹುದೇ ಸರ್ವಜ್ಞ" ಎಂಬ ಸರ್ವಜ್ಞನ ಕಾಲಜ್ಞಾನದ ವಚನದಂತೆ, ಇಂದು ಶರಣ ಮೇಳವು 12ನೇ ಶತಮಾನ ಮತ್ತು ಲಿಂಗಾಯತ ಧರ್ಮದ ಗತ–ವೈಭವವನ್ನು ಸಾಕಾರ ಮಾಡಲು ಬಸವ ಧರ್ಮ ಪೀಠದ ಮಹಾಜಗದ್ಗುರು ಪೀಠವನ್ನು ರಚಿಸಿ, ಅಂಚೆ ಚೀಟಿ ಮತ್ತು ನಾಣ್ಯಗಳ ಹುಟ್ಟಿಗೆ ಕಾರಣವಾಗಿ, ಕೊನೆಗೆ ಲಂಡನ್ನಿನ ಪಾರ್ಲಿಮೆಂಟ್ ಎದುರಿಗೆ ಥೇಮ್ಸ್ ನದಿಯ ದಡದ ಮೇಲೆ ಗುರು ಬಸವಣ್ಣನವರ ಪುತ್ಥಳಿ ಕೂಡಲು ಪ್ರೇರಣೆ ಕೊಟ್ಟು, ಧರೆಯನ್ನೆ ಬಸವಮಯ ಮಾಡಿದ ಕಾಲಾತೀತ ದಿವ್ಯ ಬೆಳಗಿನ ಮಹಾ ಪ್ರಜ್ವಲೆಯ ನಂದಾದೀಪವಾಗಿ ಕಂಗೊಳಿಸುತ್ತಲಿದೆ. ಇಂತಹ ಶರಣ ಮೇಳ ತನ್ನ 30ನೇ ಹುಟ್ಟು ಹಬ್ಬದೊಂದಿಗೆ, ತನ್ನ ಸಾಧನೆಯಲ್ಲಿ ಸಾಕಾರಗೊಳಿಸಿದ ಬಸವಧರ್ಮ ಪೀಠದ ಮಹಾಜಗದ್ಗುರು ಪೀಠಾರೋಹಣದ 25ನೇ ವಾರ್ಷಿಕ ಬೆಳ್ಳಿ ಮಹೋತ್ಸವವನ್ನು ಸಹಿತ ಆಚರಿಸಿಕೊಳ್ಳುತ್ತಿದ್ದು, ನಾವೆಲ್ಲರೂ ನಮ್ಮ ತನು, ಮನ, ಧನ, ಸಮಯ, ಪ್ರಾಣ, ಅಭಿಮಾನದಿಂದ ಸೇವೆ ಸಲ್ಲಿಸಿ, ಲಕ್ಷ ಲಕ್ಷ ಸಂಖ್ಯೆಯಲ್ಲಿ ಭಾಗಿಯಾಗೋಣ. ಧರ್ಮಗುರು ಬಸವಣ್ಣನವರ ಕೃಪೆಗೆ ಪಾತ್ರರಾಗೋಣ.

****

ಬಸವ ಗಂಗೋತ್ರಿಯಲ್ಲಿ 111 ಅಡಿ ಎತ್ತರದ ಬಸವ ಪುತ್ಥಳಿ

ಬೆಂಗಳೂರು ಕರ್ನಾಟಕದ ರಾಜಧಾನಿ ಮಾತ್ರವಲ್ಲ ಜಾಗತಿಕವಾಗಿ ಪ್ರಸಿದ್ಧಿಯನ್ನು ಪಡೆದ ನಗರ. ಎಲ್ಲ ಭಾರತೀಯರೂ ಸಮಾವೇಶವಾಗಿರುವ "ಪುಟ್ಟ ಭಾರತ" ಮಾತ್ರವಲ್ಲ ಜಗತ್ತಿನ ಎಲ್ಲ ರಾಷ್ಟ್ರಗಳವರು ಸಂದರ್ಶಿಸುವ ಸ್ಥಳ. ಬೆಂಗಳೂರಿಗೆ ಬಂದವರು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಮೈಸೂರನ್ನು ನೋಡಲು ಹೋಗದೆ ಇರಲಾರದು. ಬೆಂಗಳೂರಿನಿಂದ ಮೈಸೂರು ಹೆದ್ದಾರಿಯ ಮೇಲೆ 20ನೆಯ ಕಿಲೋಮೀಟರ್ ದೂರದಲ್ಲಿ ವಿಶ್ವಕಲ್ಯಾಣ ಮಿಷನ್ ಒಡೆತನದ 'ಬಸವ ಗಂಗೋತ್ರಿ' ಎಂಬ ಆಶ್ರಮವಿದೆ. ಇಲ್ಲಿ ಚಿನ್ಮಯಜ್ಞಾನಿ ಚನ್ನಬಸವಣ್ಣನವರ ಹೆಸರಿನ ಜ್ಞಾನಪೀಠವೂ ಸ್ಥಾಪನೆಯಾಗಿ ಇದಕ್ಕೆ ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪೀಠಾಧಿಪತಿಗಳಾಗಿದ್ದಾರೆ. ಇಲ್ಲಿ ಅನಾಥಾಲಯ ಮತ್ತು ವೃದ್ಧಾಶ್ರಮಗಳು ನಡೆಯುತ್ತಲಿವೆ. ತೆಂಗಿನ ತೋಟದೊಡನೆ ಸುಂದರವಾದ ಪರಿಸರ ಹೊಂದಿರುವ ಬಸವ ಗಂಗೋತ್ರಿಯಲ್ಲಿ ಗುರು ಬಸವಣ್ಣನವರ ಬೃಹತ್ ಪುತ್ಥಳಿ ಆಗಬೇಕೆಂದು ವಿಶ್ವಕಲ್ಯಾಣ ಮಿಷನ್ ಚೇರ್ಮನ್ನರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೇಕ್ಷಿಸಿದ್ದರು. ಬಸವ ಗಂಗೋತ್ರಿ ಬೆಂಗಳೂರು–ಮೈಸೂರು ಹೆದ್ದಾರಿಯ ಮೇಲೆ ಗಂಗೋತ್ರಿ ಹೆದ್ದಾರಿಯ ಬದಿಗೆ ಇರುವುದರಿಂದ ಪ್ರವಾಸಿಗರ ಗಮನವನ್ನು ಬೇಗನೆ ಸೆಳೆಯುವುದೆಂದು ಎಲ್ಲರ ಅಭಿಪ್ರಾಯ. ಒಂದು ದಿನ ಬೃಹತ್ ಪುತ್ಥಳಿಗೆ ಶಂಕುಸ್ಥಾಪನೆ ಸಹ ಮಾಡಲಾಯಿತು. ಕೆಲಸವನ್ನು ಆರಂಭಿಸಬೇಕು ಎನ್ನುವಷ್ಟರಲ್ಲಿ ನಮ್ಮ ಗಮನ ಬೇರೆಡೆ ಹರಿಯುವಂತಾಯಿತು. ಕೂಡಲ ಸಂಗಮದಲ್ಲಿ ಶ್ರೀ ಸಂಗಮೇಶ್ವರ ದೇವಾಲಯವನ್ನ ಸ್ಥಳಾಂತರಿಸಬೇಕು ಎನ್ನುವ ಸರ್ಕಾರದ ಪ್ರಯತ್ನದ ವಿರುದ್ಧ ಒಂದು ಚಳುವಳಿಯನ್ನು ಹಮ್ಮಿಕೊಳ್ಳಬೇಕಾಗಿ ಬಂದಿತು. ಆ ಹೋರಾಟದಲ್ಲಿ ತೊಡಗಿಸಿ ಕೊಳ್ಳಲು ಕೂಡಲ ಸಂಗಮಕ್ಕೆ ಹೋದಾಗ ಅಲ್ಲಿಯ ದುಃಸ್ಥಿತಿ ಕಂಡು ಕೂಡಲ ಸಂಗಮ ಕ್ಷೇತ್ರ ಅಭಿವೃದ್ಧಿಗಾಗಿ ಒಂದು ಟ್ರಸ್ಟನ್ನು ರಚಿಸಬೇಕಾಯಿತು. ಹೀಗೆ 1987ರಲ್ಲಿ ಬಸವ ಧರ್ಮ ಪೀಠ ಟ್ರಸ್ಟ್ ರೂಪುಗೊಂಡು ಕಾರ್ಯಾರಂಭ ಮಾಡಿತು.

ಬೀದರ್ ಜಿಲ್ಲೆಯ ಬಸವ ಕಲ್ಯಾಣ ಶರಣಭೂಮಿ ; 770 ಅಮರ ಗಣಂಗಳು ನಡೆದಾಡಿದ ಪುಣ್ಯಕ್ಷೇತ್ರ, ಅದರ ಅಭಿವೃದ್ಧಿಯನ್ನು ಮಾಡಬೇಕು ಎಂಬ ಆಂತರಿಕ ಪ್ರೇರಣೆ ಬಂದುದರಿಂದ 2001ನೆಯ ಇಸವಿಯ ಡಿಸೆಂಬರ್ 21 ರಂದು ಬಸವ ಕಲ್ಯಾಣದಲ್ಲಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ 3 ಎಕರೆ ಜಮೀನು ಖರೀದಿಸಲಾಯಿತು.

ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯ ಮಾಡಲಾಗುತ್ತಿದೆ. ಶ್ರೀಬಸವೇಶ್ವರ ಧ್ಯಾನಮಂಟಪ, ಶರಣ ಗ್ರಾಮ, ಹರಳಯ್ಯ ತೀರ್ಥ, ಮಹಾಮನೆ ಮಂಟಪ – ಇವುಗಳ ಜೊತೆಗೆ ಎಲ್ಲಕ್ಕೂ ಕಳಸವಿಟ್ಟಂತೆ ಗುರು ಬಸವಣ್ಣನವರ 108 ಅಡಿ ಪುತ್ಥಳಿಯನ್ನು ನಿರ್ಮಾಣ ಮಾಡಿ ದಿ. 28–10–2012 ರಂದು ಲೋಕಾರ್ಪಣೆ ಮಾಡಲಾಯಿತು. ಕೂಡಲ ಸಂಗಮದಲ್ಲಿ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ 63 ಅಡಿ ಎತ್ತರದ ಮೂರ್ತಿಯ ನಿರ್ಮಾಣ, ಶರಣ ಧಾಮ ವಸತಿ ಗೃಹ ನಿರ್ಮಾಣ ಮುಂತಾದ ಕೆಲಸಗಳು, ಬಸವ ಕಲ್ಯಾಣದಲ್ಲಿ ಶರಣ ಗ್ರಾಮದ ನಿರ್ಮಾಣ, ಶರಣಧಾಮ ವಸತಿ ಗೃಹ ನಿರ್ಮಾಣ, ಪಾಕಶಾಲೆ, ದಾಸೋಹ ಮಂಟಪ ಮುಂತಾದ ಕೆಲಸಗಳು ಆಗುವುದು ಅಗತ್ಯವಿದೆಯಾದರೂ ಬೆಂಗಳೂರಿನ ಶರಣ ಬಂಧುಗಳು ಬಸವ ಗಂಗೋತ್ರಿಯಲ್ಲಿ ಆಗಬೇಕಾದ ಬೃಹತ್ ಪುತ್ಥಳಿಯ ನಿರ್ಮಾಣದ ಬಗ್ಗೆ ಕಾತರಿಸುತ್ತಿದ್ದಾರೆ. ಲಿಂಗೈಕ್ಯ ಪೂಜ್ಯ ಅಪ್ಪಾಜಿಯವರ ಸದಿಚ್ಛೆಯ ಬಗ್ಗೆ ನೆನಪಿಸುತ್ತಿದ್ದಾರೆ.

ಹೀಗಾಗಿ 111 ಅಡಿ ಎತ್ತರದ ಬಸವ ಪುತ್ಥಳಿ ಕಾರ್ಯಯೋಜನೆಯನ್ನು ಕೈಗೆ ಎತ್ತಿಕೊಳ್ಳುವ ಸಂಕಲ್ಪ ಮಾಡಲಾಗಿದೆ.

ಮಟ್ಟಸವಾದ ಬಯಲಿನಲ್ಲಿ ಮಾಡಬೇಕಾಗಿರುವುದರಿಂದ 6 ಮೆಟ್ಟಲಿನ 30 ಅಡಿ ಎತ್ತರದ ಪೀಠವನ್ನು ಮಾಡಿ ಅದರ ಮೇಲೆ ಇಷ್ಟಲಿಂಗ ಪೂಜೆ –ತ್ರಾಟಕ ಯೋಗದಲ್ಲಿ ನಿರತ ಗುರು ಬಸವಣ್ಣನವರನ್ನು ರೂಪಿಸಲಾಗುವುದು. ಪೀಠದ ಕೆಳಭಾಗದಲ್ಲಿ ಅನುಭವ ಮಂಟಪ ಪರಿಕಲ್ಪನೆ ಮತ್ತು ಸಪ್ತ ಗಣಾಧೀಶರ ಮೂರ್ತಿಗಳು ಸಹಿತವಾದ ಶರಣ ಮಂಟಪವನ್ನು– ಹೀಗೆ 3 ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಷಡ್‌ಗಣಾಧೀಶರಾದ ಶೂನ್ಯ ಪೀಠಾಧೀಶ ಅಲ್ಲಮಪ್ರಭದೇವರು, ಚಿನ್ಮಯಜ್ಞಾನಿ ಚನ್ನಬಸವಣ್ಣ, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರ ಮಾತೆ ಅಕ್ಕನಾಗಲಾಂಬಿಕೆ, ವೀರ ಗಣಾಚಾರಿ ಮಡಿವಾಳ ಮಾಚಿದೇವರ ಮಂಟಪಗಳನ್ನು ಗೋಳಾಕಾರದಲ್ಲಿ ನಿರ್ಮಿಸಲಾಗುವುದು. ಮೂರ್ತಿಯ ಸುತ್ತಲೂ ಶರಣೋದ್ಯಾನವನ್ನು ನಿರ್ಮಿಸಲಾಗುವುದು. ಧರ್ಮಪಿತ ಬಸವಣ್ಣನವರ ತತ್ತ್ವಗಳ ಪ್ರಚಾರ ಮಾಡಲು ಬೃಹತ್ ಸ್ಮಾರಕಗಳು ಸಾಧಕವಾಗುತ್ತವೆಂಬ ಮನೀಷೆಯಿಂದ ಈ ಬೃಹತ್ ಪುತ್ಥಳಿಯನ್ನು ನಿರ್ಮಿಸಲಾಗುತ್ತಿದೆ. ಬಸವ ಗಂಗೋತ್ರಿಯಲ್ಲಿ ನಡೆಯುತ್ತಿರುವ ಅನಾಥಾಲಯ, ವೃದ್ಧಾಶ್ರಮಗಳಿಗೆ ಸ್ವತಂತ್ರವಾದ ಕಟ್ಟಡ ಆಗಬೇಕಾಗಿದೆ. ಆದ್ದರಿಂದ ಈ ಎಲ್ಲ ಕೆಲಸಗಳಿಗೆ ಉದಾರವಾದ ಧನಸಹಾಯದ ಅಗತ್ಯವಿದೆ. ಬಸವ ಗಂಗೋತ್ರಿಯ ಕೆಲಸಗಳು ವಿಶ್ವಕಲ್ಯಾಣ ಮಿಷನ್ ಸಂಸ್ಥೆಯಿಂದ ನಡೆಯುತ್ತಿದ್ದು ಇದಕ್ಕೆ 80ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯವಿದೆ. ಆದ್ದರಿಂದ ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಲು ಅವಕಾಶವಿದೆ.

ಅವರ ಭಕ್ತ್ಯಾನುಸಾರ ಶಕ್ತ್ಯಾನುಸಾರ ಕಟ್ಟಡ ನಿಧಿಗೆ ಎಷ್ಟಾದರೂ ಕೊಡಬಹುದು.

1. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ದಾನಿಗಳ ಫಲಕದಲ್ಲಿ ಬರೆಸಲಾಗುವುದು.

2. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿಸಲಾಗುವುದು.

3. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಪ್ರತ್ಯೇಕ ಶಿಲಾಫಲಕದಲ್ಲಿ ಕೆತ್ತಿಸಲಾಗುವುದು.

4. 1,00,000 (ಒಂದು ಲಕ್ಷ) ರೂ. ಮತ್ತು ಮೇಲೆ ಕೊಟ್ಟವರ ಹೆಸರನ್ನು ಪ್ರತ್ಯೇಕ ಶಿಲಾ ಫಲಕದಲ್ಲಿ ಕೆತ್ತಿಸಲಾಗುವುದಲ್ಲದೆ ಅವರ (ಅಥವಾ ಅವರು ತಿಳಿಸಿದವರ) ಭಾವಚಿತ್ರವನ್ನು ಮ್ಯೂಸಿಯಮ್‌ನಲ್ಲಿ ಪ್ರದರ್ಶಿಸಲಾಗುವುದು.

5. ಮೆಟ್ಟಲಿನ ಯೋಜನೆ : 30 ಅಡಿ ಎತ್ತರದ ಪೀಠವನ್ನೇರಲು ಮೆಟ್ಟಲುಗಳನ್ನು ಮಾಡುತ್ತಿದ್ದು 15000 ರೂ ಕೊಟ್ಟವರ ಹೆಸರನ್ನು ಮೆಟ್ಟಲಿನ ಮೇಲೆ ಕೆತ್ತಿಸಲಾಗುವುದು.

ಬೆಂಗಳೂರಿಗೆ ಬಂದವರು ತಪ್ಪದೆ ಸಂದರ್ಶಿಸುವಂತಹ ಬೃಹತ್ ಮೂರ್ತಿಯು ನಿರ್ಮಾಣವಾಗಲಿರುವುದರಿಂದ ಸಹೃದಯರು ತನುಮನಧನದಿಂದ ನೆರವಾಗಬೇಕೆಂದು ಕೋರುತ್ತೇವೆ.

ಸಂಪರ್ಕಿಸುವ ವಿಳಾಸ
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ, ಕುಂಬಳಗೋಡು – 560 074
ಕೆಂಗೇರಿ ಹೋಬಳಿ ಬೆಂಗಳೂರು ಜಿಲ್ಲೆ. 9448386717

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666









ದಯವೇ ಧರ್ಮದ ಮೂಲ

ಮಹಾಮಂತ್ರ ಸಾರಿದ

ವಿಶ್ವಗುರು ಬಸವಣ್ಣನವರ ಲಿಂಗೈಕ್ಯ ಕ್ಷೇತ್ರದ

ಪೂಜ್ಯಶ್ರೀ ಮಹಾಜಗದ್ಗುರು

ಡಾ.ಮಾತೆ ಮಹಾದೇವಿಯವರ

ನೇತೃತ್ವದಲ್ಲಿ

೩೦ ನೇ ಶರಣಮೇಳಕ್ಕೆ

ಕಲಬುರ್ಗಿಯ MMDR PU Science Collage ಪ್ರಾಚಾರ್ಯರಾ

ಶರಣ ಸೋಮನಾಥ್. ಡಿ ಅವರಿಂದ

*** ಶರಣ ಬಂಧುಗಳಿಗೆ ಹಾರ್ದಿಕ ಸ್ವಾಗತ ***

PRINTED BY SUMUKA PRINTERS BANGALORE 22/12/2016

Registered with Registrar oF News Papers in India, New Delhi No.19988/70 Pos Registration (SSP os BG-West Dn) No.KA/BGW-50/WPP-17/2015-17, Linced to P the Printed Magazine without Prepayment (WPP-17). Posted at Bengaluru PSO Mysuru Road (Bg-560026) on 3rd, 10th, 20th and 23rd of this month. Pages 32